3. ರಾಜ್ಯದ ಇಂದಿರಾ ಅವಸ್ ಯೋಜನೆಯಡಿ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ಫಲಾನುಭವಿಗಳಿಗೆ ಜಾಗ ಮಂಜೂರಾಗಿದ್ದು, ಆ ಸ್ಥಳದಲ್ಲಿ ವಸತಿ ಯೋಜನೆಯ ಮನೆಗಳನ್ನು ನಿರ್ಮಿಸಲು ಅವಕಾಶ ನೀಡದೆ ತೊಂದರೆ ಆಗುತ್ತಿರುವ ಬಗ್ಗೆ.

ಶ್ರೀ ಹೆಚ್. ಹಾಲಪ್ಪ (ಸೊರಬ):– ಮಾನ್ಯ ಅಧ್ಯಕ್ಷರೆ, ವಸತಿ ಸಚಿವರನ್ನು ಆಶ್ರಯ ನಿರ್ಮಾಣದಲ್ಲಿ ಆಗುತ್ತಿರುವಂತಹ ತೊಂದರೆಗಳ ವಿಚಾರದಲ್ಲಿ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):– ಕರ್ನಾಟಕ ಸರ್ಕಾರವು 2010–11ನೇ ಸಾಲಿನಿಂದ ಗ್ರಾಮೀಣ ಆಶ್ರಯ ಯೋಜನೆಗೆ ಬಸವ ವಸತಿ ಯೋಜನೆ ಎಂದು ಮರು ನಾಮಕರಣ ಮಾಡಿ ಘಟಕ ವೆಚ್ಚವನ್ನು 40 ಸಾವಿರ ರೂಪಾಯಿಯಿಂದ 63,500 ರೂಪಾಯಿಗಳಿಗೆ ಹೆಚ್ಚಿಸಿ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎರಡನೇ ಹಂತದಲ್ಲಿ ಒಂದು ಸಾವಿರ ಮನೆಗಳನ್ನು ನಿಗದಿಪಡಿಸಿ ಸದರಿ ಗುರಿಗೆ ಎದುರಾಗಿ ಅರ್ಹ ಗುಡಿಸಲು ವಾಸಿಗಳನ್ನು ಹಾಗೂ ಅರ್ಹ ವಸತಿ ರಹಿತರನ್ನು ಆಯ್ಕೆ ಮಾಡಿ ವಸತಿ ಸೌಕರ್ಯ ಕಲ್ಪಿಸಿಕೊಡಲು ಸೂಚಿಸಿದೆ. ವಸತಿ ಮಾರ್ಗಸೂಚಿ ಸಂಖ್ಯೆ ದಿನಾಂಕ:20.11.2004ರ ಪ್ರಕಾರ ಯಾವುದೇ ವಸತಿ ಯೋಜನೆಯಡಿ, ಫಲಾನುಭವಿ ವಸತಿ ಸೌಕರ್ಯ ಪಡೆಯಲು ಈ ಕೆಳಗಿನ ಅರ್ಹತೆಯನ್ನು ಕಡ್ಡಾಯವಾಗಿ ಹೊಂದಿರಬೇಕಾಗುತ್ತದೆ. ಫಲಾನುಭವಿಯು ವಸತಿ ರಹಿತನಾಗಿರಬೇಕು, ಫಲಾನುಭವಿಯು ಬಡತನ ರೇಖೆಗಿಂತ (ಬಿಪಿಎಲ್) ಕೆಳಗಿರುವ ವರ್ಗಕ್ಕೆ ಸೇರಿರಬೇಕು, ಫಲಾನುಭವಿಯು ವಿವಾಹಿತ ಮಹಿಳೆ ಅಥವಾ ಏಕ ಮಹಿಳೆ ಒಡೆತನದ ಗೃಹಿಣಿಯಾಗಿರಬೇಕು. ಇವರನ್ನು ಹೊರತುಪಡಿಸಿ ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರಿಕರು ಸಹ ಅರ್ಹರಾಗಿರುತ್ತಾರೆ. ಫಲಾನುಭವಿಗಳ ಆಯ್ಕೆಯನ್ನು ನಿವೇಶನ ಹೊಂದಿರುವ ವಸತಿ ರಹಿತರ ಪಟ್ಟಿಯಿಂದ ಪರಿಗಣಿಸಬೇಕು. ಆದರೆ ಯಾವುದೇ ಫಲಾನುಭವಿಯು ವಿವಿಧ ವಸತಿ ಯೋಜನೆಯಡಿಯಲ್ಲಿ ಆಯ್ಕೆಯಾಗಿ ಮನೆಯನ್ನು ನಿರ್ಮಿಸಿಕೊಳ್ಳಲು ತನ್ನ ಹೆಸರಿನಲ್ಲಿ ಸ್ವಂತ ನಿವೇಶನವನ್ನು ಹೊಂದಿರಬೇಕಾಗಿದ್ದು, ನಿವೇಶನಕ್ಕೆ ಸಂಬಂಧಪಟ್ಟ ದಾಖಲೆಗಳಾದ ಹಕ್ಕು ಪತ್ರ ಅಥವಾ ಖಾತಾ ಪತ್ರವನ್ನು ಗ್ರಾಮ ಪಂಚಾಯಿತಿಗೆ ಒದಗಿಸಬೇಕಾಗುತ್ತದೆ. ಈ ರೀತಿಯಾಗಿ ಸ್ವಂತ ನಿವೇಶನವನ್ನು ಹೊಂದಿರದೆ ಸರ್ಕಾರದ ಗೋಮಾಳಗಳಲ್ಲಿ ವಾಸಿಸುವ, ಸರ್ಕಾರದ ಗ್ರಾಮಠಾಣಾಗಳಲ್ಲಿ · ವಾಸಿಸುವ, ವ್ಯವಸಾಯ ಮಾಡುವ ಜಮೀನುಗಳಲ್ಲಿ ವಾಸಿಸುವ, ಅರಣ್ಯ ಇಲಾಖೆಗೆ ಸೇರಿದ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ

ಸಂಪೂರ್ಣ ಆಸ್ತಿ ಹಕ್ಕು ಇಲ್ಲದೆ, ಬೇಡಿಕೆ ಪುಸ್ತಕದಲ್ಲಿ ನಮೂದಾಗಿ, ಕಂದಾಯ ಪಾವತಿಸಿಕೊಂಡು ವಾಸಿಸುತ್ತಿರುವ ಫಲಾನುಭವಿಗಳನ್ನು ವಸತಿ ಯೋಜನೆಯಡಿಯಲ್ಲಿ ಪರಿಗಣಿಸಿ ವಸತಿ ಸೌಕರ್ಯವನ್ನು ನೀಡಲು ಬರುವುದಿಲ್ಲ. ಒಂದು ವೇಳೆ ವಸತಿ ಸೌಕರ್ಯವನ್ನು ನೀಡುವುದಾದಲ್ಲಿ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸರ್ಕಾರದ ಜಾಗಗಳನ್ನು ಫಲಾನುಭವಿಗಳಿಗೆ ನೀಡಿದಂತಾಗುವುದಲ್ಲದೆ, ನಿಯಮ ಬಾಹಿರವಾಗಿ ವಸತಿ ಯೋಜನೆಯನ್ನು ಅನುಷ್ಠಾನ ಗೊಳಿಸಿದಂತಾಗುತ್ತದೆ. ಕಂದಾಯ ಇಲಾಖೆಯ ಸುತ್ತೋಲೆಯಂತೆ ಬೇಡಿಕೆ ಪುಸ್ತಕದಲ್ಲಿ ನಮೂದಾಗಿ ಕಂದಾಯ ಪಾವತಿಸಿಕೊಂಡು ಬರುತ್ತಿರುವ ನಿವೇಶನಗಳಿಗೆ ಯಾವುದೇ ಹಕ್ಕು ಇರುವುದಿಲ್ಲವೆಂದು ಪ್ರತಿಪಾದಿಸಲಾಗಿದೆ. ಆದಕಾರಣ ಬಸವ ವಸತಿ ಯೋಜನೆಯಡಿಯಲ್ಲಿ ಸ್ವಂತ ನಿವೇಶನ ಅಥವಾ ಸರ್ಕಾರದಿಂದ ಉಚಿತವಾಗಿ ಹಂಚಿದ ನಿವೇಶನಗಳಿಗೆ ನಿರ್ಮಿಸಿದ ಗುಡಿಸಲು ವಾಸಿಗಳಲ್ಲಿ ವಾಸಿಸುವ ನಿವೇಶನ ಹೊಂದಿದ್ದು, ಬಾಡಿಗೆ ಮನೆಗಳಲ್ಲಿ ವಾಸಿಸುವ ನಿವೇಶನ ಹೊಂದಿದ್ದು, ಅವಿಭಕ್ತ ಕುಟುಂಬಗಳಲ್ಲಿ ವಾಸಿಸುವ, ಶಿಥಿಲಗೊಂಡಿರುವ ಮನೆಗಳಲ್ಲಿ ವಾಸಿಸುವ ಅರ್ಹ ವಸತಿ ರೈತರನ್ನು ಮಾತ್ರ ಬಸವ ವಸತಿ ಯೋಜನೆಯಲ್ಲಿ ಆಯ್ಕೆಗೊಳಿಸಲು ಅವಕಾಶವಿದ್ದು, ಆ ಪ್ರಕಾರ ನಿವೇಶನದ ಸಂಪೂರ್ಣ ಮಾಲೀಕತ್ವ ಹೊಂದಿರುವ ಫಲಾನುಭವಿಗಳನ್ನು ಮಾತ್ರ ಆಯ್ಕೆಗೊಳಿಸಿ, ವಸತಿ ಸೌಕರ್ಯ ಕಲ್ಪಿಸಿಕೊಡಲಾಗುತ್ತಿದ್ದು, ನಿವೇಶನದ ಹಕ್ಕಿಲ್ಲದೆ ಕಂದಾಯ ಪಾವತಿ ಮಾಡಕುವ ಪ್ರತಿ ವಸತಿಹೀನರು ಯಾವುದೇ ಯೋಜನೆಯಡಿಯಲ್ಲಿ ವಸತಿ ಸೌಕರ್ಯ ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ.

ಶ್ರೀ ಹೆಚ್. ಹಾಲಪ್ಪ:- ಮಾನ್ಯ ಅಧ್ಯಕ್ಷರೆ, ಈ ನಿಯಮಗಳ ಪ್ರಕಾರವಾದರೆ ನಾವು ಮಲೆನಾಡುಗಳಲ್ಲಿ ಮನೆಗಳನ್ನು ಕಟ್ಟುವುದಕ್ಕಾಗುವುದಿಲ್ಲ. ನಮ್ಮ ಕ್ಷೇತ್ರಕ್ಕೆ ಸರ್ಕಾರದವರು 2000 ಮನೆಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ ಅವರು ಹೇಳಿದ ಹಾಗೆ ಫಲಾನುಭವಿಗಳನ್ನು ಗುರುತಿಸಿದ್ದೇವೆ. ಆದರೆ ಮಲೆನಾಡಿನಲ್ಲಿ ಅವರವರ ಗದ್ದೆ ಹತ್ತಿರ ಮತ್ತು ತಲೆತಲಾಂತರದಿಂದ 30–40 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದರ ಹಕ್ಕುಪತ್ರ ಬೇಕೆಂದರೆ ಕಷ್ಟ. ಆದರೆ ಅವರಿಂದ ಕಂದಾಯ ಕಟ್ಟಿಸಿಕೊಳ್ಳುತ್ತಿದ್ದಾರೆ, ಕರೆಂಟ್, ನೀರು ಎಲ್ಲಾ ಕೊಟ್ಟಿದ್ದರೂ ಕೂಡ, ಅವರಿಗೆ ಹಕ್ಕುಪತ್ರವನ್ನು ಕೇಳುತ್ತಿದ್ದಾರೆ. ಆದರೆ ಅವರಿಗೆ ಹಕ್ಕುಪತ್ರವನ್ನು ಕೊಟ್ಟಿಲ್ಲ. ನಮ್ಮ ಕಡೆ ಶಾಲಾ–ಕಾಲೇಜು ಮತ್ತು ಆಸ್ಪತ್ರೆಗಳನ್ನೇ ಅರಣ್ಯ ಪ್ರದೇಶದಲ್ಲಿ ಕಟ್ಟಿಬಿಟ್ಟಿದ್ದೇವೆ. ಹಾಗಾದರೆ ಆಸ್ಪತ್ರೆಗಳನ್ನು ಮತ್ತು ಶಾಲೆಗಳನ್ನು ನಡೆಸುವ ಆಗಿಲ್ಲವೆ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಯೋಚನೆ ಮಾಡಬೇಕು. ಸರ್ಕಾರ ಚಿಂತನೆ ಮಾಡಬೇಕು. ಅಲ್ಲಿ

ಯಾರ್ಯಾರು ತಲೆಮಾರುಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರಿಗೆ ಅವಕಾಶ ಮಾಡಿ ಕೊಡಬೇಕು.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಹಾಲಪ್ಪನವರು ಏನು ವಿಚಾರ ಹೇಳುತ್ತಿದ್ದಾರೆ, ಇದು ಹಾಲಪ್ಪನವರೊಬ್ಬರ ಸಮಸ್ಯೆಯಲ್ಲ. ಇದು ಬಹುಷಃ ಕರಾವಳಿಯೂ ಸೇರಿದಂತೆ ಮಲೆನಾಡಿನಲ್ಲಿರುವ ಎಲ್ಲರ ಸಮಸ್ಯೆಯಾಗಿದೆ. ವಿಶೇಷವಾಗಿ ಚಿಕ್ಕಮಗಳೂರು ಜಿಲ್ಲೆಯ ಒಳಗಡೆ ಒಂದು ಗುಂಟೆ ಸಹ ರೆವಿನ್ಯೂ ಜಾಗವಿಲ್ಲ. ರೆವಿನ್ಯೂ ಜಾಗವನ್ನು ಹಿಂದೆ ಇದ್ದಂತಹ ಡಿ.ಸಿ., ಗೋಪಾಲಕೃಷ್ಣ ಗೌಡರು ಎಲ್ಲದನ್ನೂ Forestಗೆ handover ಮಾಡಿ ಹೋಗಿದ್ದಾರೆ. ಎಲ್ಲಾ ಕಡೆ minor forest, reserve forest ಎಂದು ಇದ್ದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾತ್ರ ಗೋಪಾಲಕೃಷ್ಣ ಗೌಡರ ಫಾರೆಸ್ಟ್ ಎಂದು ಇದೆ. ನಮ್ಮಲ್ಲಿ ಇದ್ದಂತಹ ಜಾಗವನ್ನು ರೆವಿನ್ಯೂ ಫಾರೆಸ್ಟ್‌ಗೆ ಕೊಟ್ಟಾಗಿದೆ. ನಮ್ಮ ಹತ್ತಿರ ಒಂದು ಗುಂಟೆ ಜಾಗ ಕೂಡ ಇಲ್ಲ. ಈಗ ಮನೆ ಕೊಡಬೇಕೆಂದರೆ ಮಾನ್ಯ ಹಾಲಪ್ಪನವರು ಹೇಳುತ್ತಿರುವ ರೀತಿಯಲ್ಲಿ ಯಾರ್ಯಾರು ಎಲ್ಲೆಲ್ಲಿ ಮನೆ ಕಟ್ಟಿಕೊಂಡಿರುವ ಗುಡಿಸಲುಗಳಿವೆ, ಆ ಜಾಗದಲ್ಲಿ ಕೊಟ್ಟರೆ ಮಾತ್ರ ಬಡವರಿಗೆ ನ್ಯಾಯ ಕೊಟ್ಟ ಹಾಗೆ ಆಗುತ್ತದೆ. ಇಲ್ಲದಿದ್ದರೆ ಈ ರಾಜ್ಯವನ್ನು ಗುಡಿಸಲುರಹಿತ ರಾಜ್ಯ ಎಂದು ಮಾಡುವುದಕ್ಕೆ ಮಲೆನಾಡಿನಲ್ಲಿ ಸಾಧ್ಯವಿಲ್ಲ.

ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಸುದೀರ್ಘವಾಗಿ ನಿನ್ನೆ ದಿವಸ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ಕೇವಲ ಮಲೆನಾಡು ಪ್ರದೇಶವಲ್ಲ, ಬೇರೆ ಕಡೆ ಸಹ ಅರಣ್ಯ ಪ್ರದೇಶಗಳಲ್ಲಿ 35, 40 ,50 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದು, ಅವರಿಗೆ ವಿದ್ಯುತ್, ದೀಪ, ರಸ್ತೆ ಮತ್ತು ಆಸ್ಪತ್ರೆ ಕಟ್ಟಿಕೊಟ್ಟಿದ್ದೇವೆ. ಅರಣ್ಯ ಇಲಾಖೆಯ ಈ ಕಾನೂನಿನಿಂದ ಲಕ್ಷಾಂತರ ಜನ ಬೀದಿ ಪಾಲಾಗಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್ ಎಂದು ಕರೆದು ಅದೆಲ್ಲವನ್ನು ಅರಣ್ಯ ಇಲಾಖೆಗೆ ವಹಿಸಲಾಗಿದೆ. ಎಲ್ಲೆಲ್ಲಿ ಜಾಗವಿದೆ ಅದು ಅರಣ್ಯ ಇಲಾಖೆ ಜಾಗ ಎಂದು ಬರೆದುಕೊಂಡಾಯಿತು. ಅದಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಅರಣ್ಯ ಇಲಾಖೆಯವರಿಗೆ ಮಾಡಿಕೊಡುವ ಒಂದು ಷರತ್ತಿನ ಆಧಾರದ ಮೇಲೆ ಯಾರ್ಯಾರು ಅರಣ್ಯ ಪ್ರದೇಶಗಳಲ್ಲಿ ಗುಡಿಸಲು ಅಥವಾ ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ ಅವರಿಗೆ ನಾಗರಿಕ ಸವಲತ್ತುಗಳನ್ನು ಕೊಟ್ಟಿದ್ದೇವೆ. ಯಾವುದೇ ಕಾರಣಕ್ಕೆ ಅವರನ್ನು ಒಕ್ಕಲೆಬ್ಬಿಸುವುದು ಸಾಧ್ಯವಿಲ್ಲ. ಅದಕ್ಕಾಗಿ ನಾವು ಇದರ ಬಗ್ಗೆ ಕಾನೂನು ಪರಿಶೀಲನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ, ಇದಕ್ಕೆ

ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಹುಡುಕಿ, ಯಾವುದೇ ಕಾರಣಕ್ಕೆ ಅಲ್ಲಿ ವಾಸ ಮಾಡುತ್ತಿರುವಂತಹ ಬಡವರನ್ನು ಒಕ್ಕಲೆಬ್ಬಿಸದಂತೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬಿಗಿಯಾದ ನಿಲುವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಹತ್ತು-ಹದಿನೈದು ದಿವಸದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ, ಸಮಾಲೋಚನೆ ಮಾಡಿ, ಜಮೀನುಗಳನ್ನು ಕೇಂದ್ರಕ್ಕೆ ಪರ್ಯಾಯವಾಗಿ ಕೊಟ್ಟಿರುವಂತಹ ಸಂದರ್ಭದಲ್ಲಿ ಲಕ್ಷಾಂತರ ಎಕರೆ ಸಿ ಅಂಡ್ ಡಿ ಲ್ಯಾಂಡ್ ಮತ್ತು ರೆವಿನ್ಯೂ ಲ್ಯಾಂಡ್ ಅನ್ನು ಅರಣ್ಯ ಇಲಾಖೆಗೆ ಕೊಟ್ಟಿರುವಂತಹ ಸಂದರ್ಭದಲ್ಲಿ, ಈ ರೀತಿಯಾಗಿ ಬಡವರನ್ನು ಅಲ್ಲಿಂದ ಒಕ್ಕಲೆಬ್ಬಿಸುವುದಕ್ಕೆ ಸಾಧ್ಯವಿಲ್ಲ. ಅವರು ಬೀದಿ ಪಾಲಾಗುತ್ತಾರೆ. ಹಾಗಾಗಿ ಅಲ್ಲಿರುವವರಿಗೆ ಆ ಮನೆಯನ್ನು ರಿಪೇರಿ ಮಾಡಿಕೊಳ್ಳುವುದಕ್ಕೆ, ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯವಾಗುತ್ತದೆ. ಇದು ತಲೆತಲಾಂತರದಿಂದ ನಡೆದುಕೊಂಡು ಬಂದಿರುವಂತಹ ಪದ್ಧತಿ. ಆದುದರಿಂದ ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. 30-40 ವರ್ಷದಿಂದ ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟ ಜಮೀನುಗಳಲ್ಲಿ ಈ ರೀತಿ ಗುಡಿಸಲು ಹಾಗೂ ಮನೆಗಳನ್ನು ಕಟ್ಟಿ ಯಾರು ವಾಸ ಮಾಡುತ್ತಿದ್ದಾರೆ, ಅವರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದಕ್ಕೆ ಸೂಚನೆ ಕೊಡುತ್ತೇವೆ. ಉನ್ನತ ಅಧಿಕಾರಿಗಳ ಸಭೆಯನ್ನು ಕರೆಯುತ್ತೇವೆ. ಅಗತ್ಯವಿದ್ದರೆ ನಾವು ದೆಹಲಿಗೆ ಹೋಗಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಉಳಿದಂತಹ ಅಧಿಕಾರಿಗಳನ್ನು ಭೇಟಿ ಮಾಡಿ ಇದಕ್ಕೆ ಒಂದು ಪರಿಹಾರವನ್ನು ಹುಡುಕುವಂತಹ ಪ್ರಯತ್ನವನ್ನು ಮಾಡುತ್ತೇನೆ. ಅಲ್ಲಿಯವರೆಗೆ ಯಾವುದೇ ಕಾರಣಕ್ಕೆ ಬಡವರಿಗೆ ಮತ್ತು ಸಾಮಾನ್ಯ ಜನರಿಗೆ ಅಲ್ಲಿಂದ ಒಕ್ಕಲೆಬ್ಬಿಸುವುದಕ್ಕೆ ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಸ್ಪಷ್ಟವಾದಂತಹ ನಿರ್ಧಾರಗಳನ್ನು ಸಧ್ಯದಲ್ಲಿಯೇ ತೆಗೆದುಕೊಳ್ಳುತ್ತೇವೆ. ನಮ್ಮ ಶಾಸಕರು ಯಾವುದೇ ಗ್ರಾಮದಲ್ಲಿ ಈ ರೀತಿಯ ಪರಿಸ್ಥಿಗಳು ಇದ್ದರೆ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಇದರ ಬಗ್ಗೆ ತೊಂದರೆಯಾಗದಂತೆ ಒಂದು ಸ್ಪಷ್ಟವಾದಂತಹ ನಿಲುವನ್ನು ಆದಷ್ಟು ಬೇಗ ಪ್ರಕಟ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಈ ಮನೆಯಲ್ಲಿ ನಾನು ಎಲ್ಲಾ ಸದಸ್ಯರಿಗೆ ನಾನು ಕೊಡುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದರಲ್ಲ.

ಶ್ರೀ ಕೆ. ರಘುಪತಿ ಭಟ್:– ಮಾನ್ಯ ಅಧ್ಯಕ್ಷರೆ, ಕರಾವಳಿ ಭಾಗದಲ್ಲಿ ಸಿಆರ್‌ಜೆಡ್‌ನಿಂದಾಗಿ ಈ ಸಮಸ್ಯೆಯಾಗುತ್ತಿದೆ. ಸಿಆರ್‌ಜೆಡ್‌ನಿಂದಾಗಿ ಮನೆಗಳನ್ನು ಕೊಡುವುದಕ್ಕಾಗುತ್ತಿಲ್ಲ. ನನ್ನ ಸಲಹೆ ಏನೆಂದರೆ, ಇದಕ್ಕಿಂತ ಹಿಂದೆ ಇಂದಿರಾ ಅವಾಜ್ ಮನೆಗಳನ್ನು ಕೊಡುವಾಗ ವಾಸ್ತವ ದೃಢ ಪತ್ರವನ್ನು ಕೊಟ್ಟ ಕೂಡಲೇ ಕೊಡುತ್ತಿದ್ದ ನಿಯಮಾವಳಿ ಇತ್ತು. ಈಗ ಬಸವ ವಸತಿ ಯೋಜನೆ ಎಂದು ಆದಮೇಲೆ, ಅದಕ್ಕೆ ಹತ್ತು ಸಾವಿರ ಸಾಲ ಇದ್ದುದ್ದರಿಂದ, ಅದಕ್ಕೆ ಆರ್‌ಟಿಸಿ ಬೇಕು, ಹಕ್ಕು ಪತ್ರ ಬೇಕು ಎಂದು ಕಡ್ಡಾಯ ಮಾಡಿದ್ದು. ನನ್ನ ವಿನಂತಿ ಏನೆಂದರೆ, ನಾನು ಹಿಂದೆ ಅಧಿಕಾರಿಗಳಿಗೆ ಕೂಡ ತಿಳಿಸಿದ್ದೆನು. ಇಂದಿರಾ ಅವಾಜ್ ಯೋಜನೆಗೆ ಯಾವ ನಿಯಮಾವಳಿ ಇತ್ತು, ಅದೇ ನಿಯಮಾವಳಿಯನ್ನು ಬಸವ ಇಂದಿರಾ ಆವಾಜ್ ವಸತಿ ಯೋಜನೆಗೂ ತಂದರೆ ತೊಂದರೆಯಿರುವುದಿಲ್ಲ. ಇಲ್ಲಿ ಹತ್ತು ಸಾವಿರ ರೂಪಾಯಿ ಮಾತ್ರ ಸಾಲ ಇರುವುದು. ಹಾಗಾಗಿ ಇಂದಿರಾ ಆವಾಜ್ ಯೋಜನೆಗೆ ಇದ್ದಂತಹ ನಿಯಮಾವಳಿಗಳನ್ನು ತಂದರೆ ಇದಕ್ಕೆ ಪರಿಹಾರವಾಗುತ್ತದೆ. ಆಗ ಸಿಆರ್‌ಜೆಡ್ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತದೆ. ಇಲ್ಲದಿದ್ದರೆ ಮಾನ್ಯ ಹಾಲಪ್ಪನವರು ಹೇಳಿದ ಹಾಗೆ ಮಲೆನಾಡಿನಲ್ಲಿ ಮಾತ್ರ ಅಲ್ಲ ಕರಾವಳಿಯಲ್ಲಿ ಕೂಡ ಮನೆಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:– ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತ್‌ಗಳಲ್ಲೂ ಚಕ್‌ಬಂದಿ Issue ಮಾಡುವಂಥ ವ್ಯವಸ್ಥೆಯನ್ನು ಮಾಡಿದರೆ ಆಗಬಹುದು. ಎಷ್ಟು ಸೈಟ್‌ನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ, ಎಷ್ಟು ಅಳತೆ ಇದೆ, ಅದಕ್ಕೆ ತಕ್ಕ ಹಾಗೆ ಚಕ್‌ಬಂದಿ issue ಮಾಡುವಂತೆ order ಮಾಡಿದರೂ ಆಗುತ್ತದೆ. ದಯವಿಟ್ಟು ತಾವು ಅದನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ:– ಮಾನ್ಯ ಅಧ್ಯಕ್ಷರೆ, ಸ್ವಂತ ಹಿಡುವಳಿ ಇರುತ್ತದೆ. ಆದರೆ ಅದು ರೆವಿನ್ಯೂ ದಾಖಲೆಯಲ್ಲಿರುತ್ತದೆ. ರೆವಿನ್ಯೂ ದಾಖಲೆಯ್ಲಿರುವಂಥ ಸ್ವಂತ ಹಿಡುವಳಿಗೂ ಕೂಡ ಹಕ್ಕು ಪತ್ರವಿಲ್ಲದೇ ಸಾಲ ಕೊಡುತ್ತಿಲ್ಲ. ಅವರು ತೋಟದಲ್ಲಿ ಮನೆಯನ್ನು ಕಟ್ಟಿಕೊಳ್ಳುತ್ತಾರೆ, ಊರಿನ ಒಳಗಡೆ ಗ್ರಾಮ ಠಾಣವಿಲ್ಲ. ಅವರು ಹೊರಗಡೆ ಹೋಗಿ ತೋಟದಲ್ಲಿ ಮನೆಯನ್ನು ಕಟ್ಟಿಕೊಳ್ಳಬೇಕು. ಹಕ್ಕು ಪತ್ರವನ್ನು ಕೇಳುತ್ತಾರೆ, ಹಕ್ಕು ಪತ್ರ ಮಾಡಬೇಕೆಂದರೆ Conversion ಆಗಿಲ್ಲವೆಂದು ಹೇಳುತ್ತಾರೆ. ಅದಕ್ಕೆ ಇಂದಿರಾ ಅವಾಸ್ ಯೋಜನೆಯ ನಿಯಮಾವಳಿಯನ್ನು ಅನುಸರಿಸಿದರೆ ಅನುಕೂಲವಾಗುತ್ತದೆ. ಮಾನ್ಯ ವಸತಿ ಸಚಿವರು ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯವಾಗುತ್ತದೆ. ನಾವು ಜನರಿಗೆ

ಅನುಕೂಲವಾಗುವ ನಿಯಮಗಳನ್ನು ರೂಪಿಸುವವರು, ನಿಮಗೆ ಅದರಲ್ಲಿ ಆಸಕ್ತಿ ಇದೆ. ತಾವು ಜನರಿಗೆ ಅನುಕೂಲವಾಗುವ ನಿಯಮವನ್ನು ರೂಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ):- ಮಾನ್ಯ ಅಧ್ಯಕ್ಷರೆ, ಇದು ಕೇವಲ ದಕ್ಷಿಣ ಕರ್ನಾಟಕ ಭಾಗದಲ್ಲಿ ಅಷ್ಟೆ ಅಲ್ಲ, ಉತ್ತರ ಕರ್ನಾಟಕ ಭಾಗದಲ್ಲೂ ಈ ಸಮಸ್ಯೆ ಇದೆ. ನನ್ನ ಕ್ಷೇತ್ರದ ಬನಹಟ್ಟಿಯಲ್ಲಿ ಸುಮಾರು ಸಾವಿರಾರು ಎಕರೆಯಲ್ಲಿ ಅನಧಿಕೃತವಾಗಿ ಮನೆಗಳನ್ನು, ಗುಡಿಸಲುಗಳನ್ನು ಕಟ್ಟಿಕೊಂಡು ಕಳೆದ ಸುಮಾರು 50 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ನಗರಸಭೆಯ ಉತಾರ್(ದಾಖಲೆ) ಇವೆ, ಆದರೆ ಅಲ್ಲಿ Permission ಕೊಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು ನಾಲ್ಕೈದು ಸಾವಿರ deforest land ಇದೆ. ಅದನ್ನು ಈ ಭಾಗಕ್ಕೆ ಯಾವ್ಯಾವುದೋ ಉದ್ದೇಶಕ್ಕೆ ಹಸ್ತಾಂತರ ಮಾಡುತ್ತಿದ್ದಾರೆ. ಅಲ್ಲಿ ವಾಸ ಮಾಡುತ್ತಿರುವ ಜನರಿಗೋಸ್ಕರ ಇದನ್ನು ಕಾಯ್ದಿರಿಸಿ, ಅರಣ್ಯ ಇಲಾಖೆಯಿಂದ clearance ಆಗಬೇಕು. ಅನಂತರ ಅದನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿ ಈಗ ಅರಣ್ಯ ಇಲಾಖೆಯ ಜಾಗದಲ್ಲಿ ವಸತಿ ಏನು ಮಾಡಿಕೊಂಡಿದ್ದಾರೆ, ಆ ಜಾಗವನ್ನು ನಾಗರೀಕ ಸೌಲಭ್ಯಗಳಿಗಾಗಿ ನಗರಸಭೆಗೆ ಹಸ್ತಾಂತರ ಮಾಡಬೇಕೆಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕೆ ಇನ್ನಷ್ಟು ಒತ್ತು ಕೊಟ್ಟು ಬೇಗನೆ ಮಾಡಬೇಕು. ಏಕೆಂದರೆ, ಅಲ್ಲಿ ಕೆಲವು ಶ್ರೀಮಂತ ಜನರು ಸಹ ಅನಧಿಕೃತವಾಗಿ ಎಕರೆಗಟ್ಟಲೆ ಜಾಗದಲ್ಲಿ boundary ಹಾಕಿಕೊಂಡು ಹಿಡಿದುಕೊಂಡಿದ್ದಾರೆ. ಆ ಕಾರಣಕ್ಕಾಗಿ ಸರ್ಕಾರ ಅಧಿಕೃತ ಆದೇಶವನ್ನು ಮಾಡಿದರೆ, ಅದು 30*40 ಅಡಿ ಅಳತೆಯ ಜಾಗವನ್ನು ಆಶ್ರಯ ಯೋಜನೆಯ ಪ್ಲಾಟ್‌ಗೆ ಏನು ರೇಟ್ ಕೊಡುತ್ತೀರಿ ಆ ದರದಲ್ಲಿ ಕೊಡಿ ಇದರಿಂದ ರಸ್ತೆಗಳಿಗೆ, ಮೈದಾನಗಳಿಗೆ, ಶಾಲೆಗಳಿಗಾಗಿ ಜಾಗವನ್ನು ಕಾಯ್ದಿರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಆಗದಿದ್ದರೆ ಇಲ್ಲಿ ಯಾರೂ ಹೋಗುವುದಕ್ಕೆ ಆಗುವುದಿಲ್ಲ. ಇಲ್ಲಿ ಜಾಗವನ್ನು ಹಿಡಿದುಕೊಂಡು ದುರುಪಯೋಗ ಮಾಡುವಂಥದ್ದು ಆಗುತ್ತದೆ. ಆದರೆ ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತದೆ. ಆ ಕಾರಣಕ್ಕಾಗಿ ದಯಮಾಡಿ ಬೇಗನೆ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಗೆ ಬರೆದು ಆ ಜಾಗವನ್ನು ಸರ್ಕಾರ ತೆಗೆದುಕೊಂಡು ನಗರಸಭೆಗೆ ಹಸ್ತಾಂತರ ಮಾಡಿ, ಅವರಿಗೆ ಹಕ್ಕು ಪತ್ರಗಳನ್ನು ಕೊಟ್ಟು, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ವಸತಿ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ:- ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯತಿಯಲ್ಲಿ 9 ನಂಬರ್ ಪುಸ್ತಕದಲ್ಲಿ ದಾಖಲು ಮಾಡಿಕೊಟ್ಟರೆ ಸರಿಯಾಗುತ್ತದೆ. ನಾವು ಹಿಂದೆ ಮಂಡಲ ಪಂಚಾಯತಿ ಪ್ರಧಾನ ಇದ್ದಾಗ 1987 ರಲ್ಲಿ ಮಾಡಿದ್ದು ಇದೆ. ಆ ರೀತಿ ಮಾಡಿದರೆ ಯಾವ ತೊಂದರೆಯಾಗುವುದಿಲ್ಲ. ಅದು forest ಇರಲಿ, ಎಲ್ಲೆ ಅವರು ಮನೆಯನ್ನು ಕಟ್ಟಲಿ, ಜಮೀನಿನಲ್ಲೇ ಕಟ್ಟಲಿ, ಅದಕ್ಕೆ No.9ರಲ್ಲಿ register ದಾಖಲು ಮಾಡಿ, ಮಾನ್ಯ ಅಪ್ಪಚ್ಚು ರಂಜನ್‌ರವರು ಹೇಳಿದ ಹಾಗೆ ಚಕ್‌ಬಂದಿಯನ್ನು ಹಾಕಿ ಬಿಟ್ಟರೆ ಸರಳವಾಗುತ್ತದೆ. ದಯವಿಟ್ಟು ಆ ರೀತಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ವಿ.ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಹಾಲಪ್ಪನವರು, ಮಾನ್ಯ ರಘುಪತಿ ಭಟ್‌ರವರು, ಮಾನ್ಯ ಅಪ್ಪಚ್ಚು ರಂಜನ್‌ರವರು, ಮಾನ್ಯ ಸಿ.ಟಿ.ರವಿಯವರು, ಮಾನ್ಯ ಸಿದ್ದು ಸವದಿಯವರು ಹಾಗೂ ಮಾನ್ಯ ಬೆಳ್ಳುಬ್ಬಿಯವರು ಹೇಳಿದ ವಿಚಾರಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾವು ಇಂದಿರಾ ಆವಾಸ್ ಯೋಜನೆಯನ್ನು ಬಸವ ವಸತಿ ಯೋಜನೆಯೆಂದು ಮಾಡಿದ ಉದ್ದೇಶವೇನೆಂದರೆ, ಕೇಂದ್ರ ಸರ್ಕಾರ ಕೊಟ್ಟಿರುವಂಥ ಕೆಲವಾರು ಸೂಚನೆಗಳನ್ನು ಮಾತ್ರ ಬಸವ ವಸತಿ ಯೋಜನೆಯಲ್ಲಿ ಅಳವಡಿಸಿದ್ದೇವೆ. ಆ ರೀತಿ ಮಾಡಿದರೆ ಸರಿಯಾಗುವುದಿಲ್ಲವೆಂಬ ದೃಷ್ಟಿಯಿಂದಲೇ ಸುಮಾರು ದಿವಸಗಳಿಂದ ಇದು ನಡೆದುಕೊಂಡು ಬಂದಿದೆ. ನಾವು ಹಿಂದೆ ಇದ್ದಂಥ ಕಾನೂನನ್ನು ನಮ್ಮ ಸರ್ಕಾರ ಬಂದ ಮೇಲೆ ಬದಲಾವಣೆ ಮಾಡಿಲ್ಲವೆನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಏನಾಗಿದೆಯಿಂದರೆ ಈ ಸಾರಿ ನಾವು ಅಧಿಕಾರಕ್ಕೆ ಬಂದಮೇಲೆ ಹಣ ದುರುಪಯೋಗ ಆಗಬಾರದೆಂಬ ದೃಷ್ಟಿಯಿಂದ ಯಾರು actual ಆಗಿ ಇದ್ದಾರೆ, ಅವರನ್ನು ಗುರುತಿಸಬೇಕೆಂಬ ದೃಷ್ಟಿಯಿಂದ ನಾವು ಇದನ್ನು ಮಾಡಿದ್ದು, ಈ ನಿಬಂಧನೆಗಳು ಏನು ಇವೆ, ಈ ನಿಬಂಧನೆಯನ್ನು ನಾವು ಯಾರು ಹಾಕಿರುವಂಥದ್ದಲ್ಲ. ಈಗಾಗಲೇ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ನಿನ್ನೆ ನಡೆದ ಸಭೆಯಲ್ಲಿ ಇನ್ನು 15 ದಿವಸಗಳಲ್ಲಿ ಇದನ್ನು ಬಗೆಹರಿಸಬೇಕೆಂಬ ತೀರ್ಮಾನ ಆಗಿದೆ. ಇಂದಿರಾ ಆವಾಸ್ ಯೋಜನೆಯಲ್ಲಿ ಏನು ಕಾನೂನು ಅಳವಡಿಸಲಾಗಿದೆಯೋ ಅದನ್ನೇ ಬಸವ ವಸತಿ ಯೋಜನೆಯಲ್ಲಿ ಅಳವಡಿಸಲಾಗಿದೆ. ಯಾವ್ಯಾವುದು ಎಲ್ಲೆಲ್ಲಿ ಇದೆಯೆಂಬುದನ್ನು ಗಮನಿಸುವುದಕ್ಕೆ ಆಗಿರಲಿಲ್ಲ. ಆದರೆ ಒಂದು ವಿಚಾರವನ್ನು ಈ ಸಭೆಯ ಮೂಲಕ ಎಲ್ಲಾ ಸದಸ್ಯರಲ್ಲಿ ವಿನಂತಿ

ಮಾಡುವುದೇನೆಂದರೆ, ಇನ್ನು 15–20 ದಿವಸಗಳಲ್ಲಿ ಇದನ್ನು ಬಗೆಹರಿಸುವುದರ ಜೊತೆಗೆ ಹಿಂದಿನಿಂದ ಯಾವ ರೀತಿ ನಡೆದುಕೊಂಡು ಹೋಗುತ್ತಿದೆ, ಅದೇ ರೀತಿ ಸುಲಲಿತವಾಗಿ ನಡೆಯುವಂತೆ ಕ್ರಮ ವಹಿಸುತ್ತೇವೆ. ಮತ್ತೊಂದು ಕಡೆ ಒಂದು ಮನೆಗೆ 3–4 ಮನೆಗಳನ್ನು ಕೊಟ್ಟಿರುವಂಥ ನಿದರ್ಶನಗಳು ಇದ್ದವು. ದನದ ಕೊಟ್ಟಿಗೆಯನ್ನು ಕೂಡ ಮನೆ ಮಾಡಿಕೊಳ್ಳವ ಸಂದರ್ಭಗಳು ಇದ್ದದ್ದರಿಂದ ಕಾನೂನು ಸ್ವಲ್ಪ ಬಿಗಿಯಾಗಿದೆ. ಇದರಿಂದ ಯಾರ್ಯಾರಿಗೆ ಅನಾನುಕೂಲವಾಗುತ್ತಿದೆ, ಅವರೆಲ್ಲರಿಗೂ ಸರಿಪಡಿಸಲು ಕೆಲಸವನ್ನು ಇನ್ನು 15–20 ದಿವಸಗಳಲ್ಲಿ ಮಾಡಿ, ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಇದನ್ನು ತಲುಪಿಸುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ. ರಘುಪತಿ ಭಟ್:– ಮಾನ್ಯ ಅಧ್ಯಕ್ಷರೆ, ಇಂದಿರಾ ಅವಸ್ ಯೋಜನೆಯಲ್ಲಿ ಹಕ್ಕು ಪತ್ರ ಕಡ್ಡಾಯವಾಗಿರಲಿಲ್ಲ, ಆಶ್ರಯ ಯೋಜನೆಗೆ ಇತ್ತು.

ಶ್ರೀ ಕೆ.ಜಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇಂದಿರಾ ಅವಾಸ್‌ನಲ್ಲಿ ಖಾತೆ ಇಲ್ಲದೇ ಹೋದರೆ ಯಾವುದೇ ಕಾರಣಕ್ಕೂ ಗುಡಿಸಲನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಕರ್ನಾಟಕ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ನಿಯಮವಿರುವುದರಿಂದ ಯಾವುದೇ ಕಾರಣಕ್ಕೂ ಕರ್ನಾಟಕ ರಾಜ್ಯವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಮಾನ್ಯ ಮಂತ್ರಿಯವರು ಈ ನಿಯಮವನ್ನು ಬದಲಾವಣೆ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ರಘುಪತಿ ಭಟ್:– ಇಂದಿರಾ ಅವಾಸ್‌ನಲ್ಲಿ ಹಕ್ಕು ಪತ್ರ ಕಡ್ಡಾಯವಾಗಿರಲಿಲ್ಲ ಇದು ಬಹಳ ಸ್ಪಷ್ಟವಾಗಿದೆ. ನಾವೇ ಮಾಡಿ ಕೊಟ್ಟಿದ್ದೇವೆ. ಈಗ ಬಸವ ವಸತಿ ಯೋಜನೆ ಬಂದಮೇಲೆ ರೂ.10,000 ಸಾಲ ಇದೆ. ಹಿಂದೆ ಇಂದಿರಾ ಅವಾಸ್ ಇರುವಾಗ ರೂ.10,000 ಸಾಲವೆಂದು ಅಲ್ಲ, ಅದು ಅನುದಾನವೆಂದು ಇತ್ತು. ಈಗ ಬಸವ ಅವಾಸ್ ಯೋಜನೆಯಲ್ಲಿ ರೂ.10,000 ಸಾಲವೆಂದು ಆಗಿರುವುದರಿಂದ ಅವರಿಗೆ ಏನಾದರು ಮುಟ್ಟುಗೋಲು ಹಾಕಿಕೊಳ್ಳಲು ಇರಬೇಕೆಂದು RTC ಕೇಳುತ್ತಿರುವಂಥದ್ದು. ಹಿಂದೆ ಇಂದಿರಾ ಅವಾಸ್‌ನಲ್ಲಿ ಹಕ್ಕುಪತ್ರ ಕಡ್ಡಾಯವಾಗಿರಲಿಲ್ಲ. ತಾವು ಅಷ್ಟಾದರೂ ಮಾಡಿ, ಅದು ತಮ್ಮ ಕೈಯಲ್ಲಿ ಇದೆ, ಅದನ್ನು ಮಾಡಿದರೆ ಎಲ್ಲಾ ಪರಿಹಾರವಾಗುತ್ತದೆ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲೂ ಇತ್ತೀಚೆಗೆ ಸಮಸ್ಯೆಯಾಗಿದೆ. ಹಿಂದಿನ ಸಚಿವರಾಗಿದ್ದ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಇದ್ದಾಗ ಬೆಂಗಳೂರಿನಲ್ಲಿ ಅನಧಿಕೃತ slumಗಳಿತ್ತು. ಆ ಎಲ್ಲಾ slumಗಳನ್ನು ಅಧಿಕೃತ slumಗಳೆಂದು ಘೋಷಣೆ ಮಾಡಿ, ಅದಾದನಂತರ

ಅವರಿಗೆ ಹಕ್ಕು ಪತ್ರಗಳನ್ನು ಬೃಹತ್ ಬೆಂಗಳೂರು ಮಹಾ ನಗರಪಾಲಿಕೆಯಿಂದ ಕೊಡುವುದೆಂದು ತೀರ್ಮಾನವಾಯಿತು. ಇತ್ತೀಚೆಗೆ ಇದು slum ಘೋಷಣೆಯಾದ ಮೇಲೆ Slum clearance ಗೋಸ್ಕರ ಅದೆಲ್ಲವನ್ನು demolish ಮಾಡಿ ಮನೆಯನ್ನು ಕಟ್ಟುತ್ತೇವೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದರಿಂದ ಅನೇಕ ಅನಾಹುತಗಳಾಗುವಂಥದ್ದು ಇದೆ. ಅದು ಅನಧಿಕೃತವಾಗಿದ್ದರೂ ಕೂಡ ಜನರು ಚೆನ್ನಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದು ಅನಧಿಕೃತವಾಗಿದ್ದರೂ ಕೂಡ ಅದನ್ನು ಅಧಿಕೃತ ಮಾಡುವಂಥದ್ದು ಸರ್ಕಾರದ ಕರ್ತವ್ಯವಾಗಿದೆ. ಇದರಲ್ಲಿ ಬಡವರು ಇದ್ದಾರೆ, ಆ ಹಿನ್ನಲೆಯಲ್ಲಿ ಅವರಿಗೆ ಹಕ್ಕು ಪತ್ರವನ್ನು ಕೊಡುವ ಪ್ರಯತ್ನ ಮೊದಲಿಗೆ ಆಗಿ, ಅನಂತರ ಯಾರಿಗೆ ಮನೆಗಳು ಇಲ್ಲ ಅವಶ್ಯಕತೆ ಇದೆಯೆಂದು ಆದರೆ ಅಂಥವರಿಗೆ ಹೊಸ ಜಾಗಗಳನ್ನು ನೋಡಿ ಮನೆಗಳನ್ನು ಕಟ್ಟುವಂಥ ಯೋಜನೆಯನ್ನು ತಂದರೆ ಬಹಳ ಅನುಕೂಲವಾಗುತ್ತದೆ, ಇಲ್ಲವೆಂದರೆ ಅನಗತ್ಯವಾಗಿ ಗೊಂದಲವನ್ನು ನಿರ್ಮಾಣವಂಥ ಒಂದು ಆಜ್ಞೆ ಇತ್ತೀಚೆಗೆ ಸರ್ಕಾರದಿಂದ ಬಂದಿದೆ. ದಯವಿಟ್ಟು ಆ ಆಜ್ಞೆಯನ್ನು ಹಿಂದಕ್ಕೆ ಪಡೆಯಬೇಕೆಂದು ತಮ್ಮ ಮುಖಾಂತರ ಮಾನ್ಯ ವಸತಿ ಸಚಿವರನ್ನು ಒತ್ತಾಯ ಮಾಡುತ್ತೇವೆ.

ಶ್ರೀ ಎಂ.ಸತೀಶ್ ರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಇಡೀ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ slums ಇದೆ. ಆ slumಗಳಲ್ಲಿ ಮನೆಗಳನ್ನು ಹೊಡೆದು ಹಾಕಿ ಅವರಿಗೆ ಮನೆಯನ್ನು ಕಟ್ಟಿಕೊಡುವ ಕೆಲಸವನ್ನು ಸನ್ಮಾನ್ಯ ವಸತಿ ಸಚಿವರು ಮಾಡುತ್ತಿದ್ದಾರೆ. ಆದರೆ ಅವರಿಗೆ ಮೊದಲು ಹಕ್ಕು ಪತ್ರವನ್ನು ಕೊಡಬೇಕು. ಅವರಿಗೆ ಹಕ್ಕು ಪತ್ರವನ್ನು ಕೊಟ್ಟು ಆದಮೇಲೆ ಅದು slum ಎಂದು ಘೋಷಣೆ ಆದ ಮೇಲೆ ಅಲ್ಲಿ ವಸತಿ ಸಮುಚ್ಚಯವನ್ನು ಕಟ್ಟಿದರೆ ಒಳ್ಳೆಯದಾಗುತ್ತದೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ವಿ.ಸೋಮಣ್ಣ:– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರಘುಪತಿ ಭಟ್‌ರವರು ಇಂದಿರಾ ಆವಾಸ್‌ನಲ್ಲಿ ಹಕ್ಕು ಪತ್ರ ಕಡ್ಡಾಯವಿರಲಿಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿ ತಕ್ಷಣವೇ ಅದನ್ನು ಬಸವ ವಸತಿ ಯೋಜನೆಗೂ ಅಳವಡಿಸುವ ಕೆಲಸವನ್ನು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಮಾಡಿಸುತ್ತೇನೆ. ಎರಡನೆಯದಾಗಿ, ಇವತ್ತು 10,000 ರೂ.ಗಳು ಸಾಲ ಏನು ಇದೆ, ಈಗಾಗಲೇ ನಮ್ಮ ಸಭಾನಾಯಕರು ಹಾಗೂ

ಮುಖ್ಯಮಂತ್ರಿಯವರು ಘೋಷಣೆ ಮಾಡಿರುವಂತೆ ನನ್ನ ಮನೆ, ನನ್ನ ಸ್ವತ್ತು ಇದರಲ್ಲಿ ಇಂದಿರಾ ಅವಾಸ್ ಆಗಿರಲಿ, ಬಸವ ವಸತಿಯಲ್ಲೂ ಕೂಡ 10,000 ರೂ.ಗಳು ಏನು ಇತ್ತು, ಈ ವಿಚಾರವಾಗಿ ಮಾನ್ಯ ರಘುಪತಿ ಭಟ್‌ರವರ ಗಮನಕ್ಕೆ ತರುವುದೇನೆಂದರೆ ಈ 10,000 ರೂ.ಗಳನ್ನು ನಾವು loan ಆಗಿ ಕೊಟ್ಟಿರುವಂಥದ್ದು. ಅವರು ಈ 10,000 ರೂ.ಗಳಿಗೋಸ್ಕರ ಹಕ್ಕನ್ನು ಪಡೆದಿರಲಿಲ್ಲ. 22 ಲಕ್ಷ ಫಲಾನುಭವಿಗಳದ್ದು ಹಾಗೇ ಇತ್ತು. ಅದನ್ನು ನಿರ್ವಹಣೆ ಮಾಡುವುದಕ್ಕೆ 1,085 ಕೋಟಿ ರೂ.ಗಳ ಬಡ್ಡಿಯನ್ನು ಮನ್ನಾ ಮಾಡಿ, 22 ಲಕ್ಷ ಫಲಾನುಭವಿಗಳು ಯಾರು ಇದ್ದರು, ಅವರು 10,000 ರೂ.ಗಳನ್ನು ಕಟ್ಟಿದರೆ ಅವರಿಗೆ ಮನೆಯ ಒಡೆತನವನ್ನು ನೀಡುವಂಥ ಪವಿತ್ರವಾದಂಥ ಕೆಲಸವನ್ನು ಮಾಡಿದ್ದೇವೆ. ಅದೇ ರೀತಿಯಾಗಿ ಮಿತ್ರರಾಗಿರತಕ್ಕಂಥ ಮಾನ್ಯ ಅರವಿಂದ ಲಿಂಬಾವಳಿಯವರು, ಮಾನ್ಯ ಸತೀಶ್ ರೆಡ್ಡಿಯವರು ಹೇಳಿದಂತೆ ಬೆಂಗಳೂರು ನಗರದಲ್ಲಿ 2–3 ರೀತಿಯ slumಗಳು ಇವೆ. ಅವು ಯಾವುವೆಂದರೆ ಸರ್ಕಾರಿ slumಗಳು, B.B.M.P. ವ್ಯಾಪ್ತಿಯಲ್ಲಿ ಬರುವ slumಗಳು, ಮತ್ತು ಖಾಸಗಿ ವ್ಯಕ್ತಿಗಳು slumಗಳು ಇವೆ. ಈ ಹಕ್ಕು ಪತ್ರ ವಿಷಯವಾಗಿ ಮೊನ್ನೆ ದಿವಸ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಮತ್ತು Housing Secretaryಯವರೊಂದಿಗೆ ಒಂದು ಸಭೆಯನ್ನು ಮಾಡಿದ್ದೇವೆ. ತಕ್ಷಣವೇ ಅವರನ್ನು ಗುರುತಿಸಿ, ಅವರಿಗೆ ಹಕ್ಕುಪತ್ರಗಳನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಇವತ್ತು ನಾವು ಅಲ್ಲಿ high rise buildings ಕಟ್ಟಬೇಕೆಂದಾಗ, ಅಲ್ಲಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ಮನೆಗಳನ್ನು ಕಟ್ಟುವಾಗ, ಈಗಿರತಕ್ಕಂಥ ವ್ಯವಸ್ಥೆಯಲ್ಲೇ ಮುಂದುವರೆಯಬಾರದು ಎನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡಬೇಕೆಂದಿದ್ದೇವೆ. ಬೆಂಗಳೂರು ನಗರದಲ್ಲಿ ನಾವು 18,800 ಮನೆಗಳನ್ನು ವಿವಿಧ ಹಂತಗಳಲ್ಲಿ ಕಟ್ಟಿ ಈಗಾಗಲೇ 11,000 ಮನೆಗಳನ್ನು ಜನರಿಗೆ ಕೊಟ್ಟಿದ್ದೇವೆ. ಇನ್ನೂ ಐದಾರು ಸಾವಿರ ಮನೆಗಳನ್ನು ಕಟ್ಟಬೇಕಾಗಿದೆ. ಅದು ರಾಗಿಗುಡ್ಡ ಇರಬಹುದು, ಪಂತರಪಾಳ್ಯ ಇರಬಹುದು, ಸನ್ಯಾಸಿಗುಡ್ಡ ಇರಬಹುದು, ಎ.ಡಿ.ಹಳ್ಳಿ ಇರಬಹುದು, ಹೀಗೆ ಬೇರೆಬೇರೆ ಭಾಗಗಳಲ್ಲಿ ನಾವು ಈಗಾಗಲೇ ಮನೆಗಳನ್ನು ಕಟ್ಟಿಕೊಡುತ್ತಿದ್ದೇವೆ. ಇದರ ಜೊತೆಯಲ್ಲಿ, ಬೆಂಗಳೂರು ನಗರದಲ್ಲಿರುವ 450ಕ್ಕೂ ಮೇಲ್ಪಟ್ಟ ಕೊಳಚೆ ಪ್ರದೇಶಗಳಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳಿಗೆ B.S.V.P. ಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯವರು 10,000 ಮನೆಗಳನ್ನು ಕಟ್ಟತಕ್ಕಂಥ ಒಂದು ಪ್ರಕ್ರಿಯೆಯನ್ನು

ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇಲೆ ಮಾಡಿದ್ದಾರೆ. ನಾವೂ ಕೂಡ ಇಂಥವುಗಳನ್ನು ಗುರುತಿಸಿ, ತಕ್ಷಣವೇ ಹಕ್ಕು ಪತ್ರಗಳನ್ನು ಕೊಡುವುದಕ್ಕೆ, ಹೌಸಿಂಗ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ನಾಲ್ಕೈದು ಜನ ಅಧಿಕಾರಿಗಳ ಒಂದು ಸಮಿತಿಯನ್ನು ಮಾಡಿದ್ದೇವೆ. 15 ದಿನಗಳೊಳಗೆ ಮಾಹಿತಿಯನ್ನು ಪಡೆದು ಬೆಂಗಳೂರು ನಗರದಲ್ಲಿ ಮಾತ್ರವಲ್ಲ, ರಾಜ್ಯದ ಇತರ ಭಾಗದಲ್ಲಿರತಕ್ಕಂಥ ಕೊಳಚೆ ಪ್ರದೇಶದ ನಿವಾಸಿಗಳಿಗೂ ಹಕ್ಕುಪತ್ರವನ್ನು ನೀಡಬೇಕು ಎನ್ನುವ ದೃಷ್ಟಿಯಿಂದ ಈ ಕೆಲಸವನ್ನು ಮಾಡಿದ್ದೇವೆ. ಇದೇ ರೀತಿ, Jn-NURM ನಲ್ಲಿರಬಹುದು, ರಾಜೀವ್ ಆವಾಸ್ ಯೋಜನೆ ಇರಬಹುದು, ಇವುಗಳಲ್ಲಿ ಇನ್ನಿತರ ಪ್ರದೇಶಗಳಲ್ಲಿ ವಾಸ ಮಾಡುವವರಿಗೆ ಹಕ್ಕುಪತ್ರಗಳನ್ನು ಕೊಡುವುದರ ಜೊತೆಯಲ್ಲಿ ನಾವು ಗುಡಿಸಲು ರಹಿತ ರಾಜ್ಯವನ್ನು ಮಾಡುವಾಗ, ಅದು ಖಾಸಗಿ ಸ್ಲಂಗಳಿರಬಹುದು, ಇತರ ಸ್ವಾಯತ್ತ ಸ್ಲಂಗಳಿರಬಹುದು, ಸರ್ಕಾರಿ ಸ್ಲಂಗಳಿರಬಹುದು, ಇವೆಲ್ಲವುಗಳಿಗೂ ಆದ್ಯತೆಯನ್ನು ಕೊಟ್ಟು, ಅಲ್ಲಿರುವ ಗುಡಿಸಲುಗಳನ್ನು ತೆಗೆದು ಹಾಕಿ ಅಲ್ಲಿರುವ ಜನರೂ ಕೂಡ ನಾಗರೀಕವಾಗಿ ಬದುಕುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಲು ನಾವು ಈ ಸಾರಿ ರಾಜೀವ್ ಆವಾಸ್ ಯೋಜನೆಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅಡಿಯಲ್ಲಿ ಮಾಡುವುದಕ್ಕೆ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. 15 ದಿನಗಳಲ್ಲಿ ವರದಿ ಬಂದ ಮೇಲೆ ಒಂದೂವರೆಯಿಂದ ಎರಡು ತಿಂಗಳುಗಳಲ್ಲಿ ರಾಜ್ಯದ ಎಲ್ಲ ಪ್ರಮುಖ ನಗರಗಳಲ್ಲಿರತಕ್ಕಂಥ ಕೊಳಚೆ ಪ್ರದೇಶಗಳಲ್ಲಿರುವ ನನ್ನ ಅಣ್ಣ ತಮ್ಮಂದಿರಿಗೆ ಹಕ್ಕು ಪತ್ರಗಳನ್ನು ನೀಡುವಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್.ಎಸ್. ನಂದೀಶ್ ರೆಡ್ಡಿ:– ನೀವು ಬೆಂಗಳೂರಿನಲ್ಲಿ ಐದು ಸಾವಿರ ಹಕ್ಕು ಪತ್ರಗಳನ್ನು ಕೊಡುವುದಕ್ಕೆ ಯೋಚನೆ ಮಾಡುತ್ತಿದ್ದೀರಿ ಎನ್ನುವುದು ನಿಜವಾಗಲೂ ಅಭಿನಂದಿಸಬೇಕಾದುದು. ಆದರೆ ಇದು ಬಹಳ ಕಡಿಮೆಯಾಗುತ್ತದೆ. ಕಳೆದ ತಿಂಗಳಲ್ಲಿ ನಾವು ವಸತಿ ಸಚಿವರ ಜೊತೆ ಒಂದು ಸಭೆಯನ್ನು ಮಾಡಿ, ಅಲ್ಲಿ ಸಚಿವರಿಗೆ ನಮ್ಮ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಪಟ್ಟಿಯನ್ನು ಕೊಟ್ಟಿದ್ದೇನೆ. ನಮ್ಮ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರವೊಂದರಲ್ಲೇ, ಹಕ್ಕು ಪತ್ರಗಳಿಲ್ಲದೇ ಇರುವಂಥ 11,098 ಮನೆಗಳಿವೆ. ಈಗಿರುವ ಶೀಟ್ ಮನೆಗಳನ್ನು ತೆಗೆದು ಅಲ್ಲಿ ಆರ್.ಸಿ.ಸಿ. ಮನೆಗಳನ್ನು ಕಟ್ಟಬೇಕೆಂದು ಏನೊಂದು ತೀರ್ಮಾನ ಮಾಡಿ ಸರ್ಕಾರದ ಕಡೆಯಿಂದ ಯೋಚನೆ ಮಾಡಿದ್ದಾರೆ, ಅದನ್ನು ಮಾಡುವುದಕ್ಕೆ ಮೊದಲು ಇವರಿಗೆ ಹಕ್ಕುಪತ್ರಗಳನ್ನು ಕೊಡಬೇಕು. ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರವೊಂದರಲ್ಲೇ

ಸುಮಾರು 11,000 ಇಂಥ ಮನೆಗಳಿದ್ದರೆ ಇಡೀ ಬೆಂಗಳೂರು ನಗರ ಜಿಲ್ಲೆಯಲ್ಲಿ ಎಷ್ಟಿರಬಹುದು ಎಂದು ನಾವು ಯೋಚನೆ ಮಾಡಬೇಕು. ಆದ್ದರಿಂದ ಮೊದಲು ಹಕ್ಕುಪತ್ರಗಳನ್ನು ನೀಡಿ, ನಂತರ ಅವರ ಅಭಿಪ್ರಾಯವನ್ನು ಪಡೆದು ಅವರಿಗೆ ಆಸಕ್ತಿ ಇದ್ದರೆ ಮನೆಗಳನ್ನು ಕಟ್ಟುವುದಕ್ಕೆ ಯೋಚನೆ ಮಾಡಬೇಕು. ಪ್ರಥಮ ಆದ್ಯತೆ ಮೇರೆಗೆ ಹಕ್ಕುಪತ್ರಗಳನ್ನು ಕೊಡುವುದಾಗಬೇಕು ಎಂದು ತಮ್ಮ ಮೂಲಕ ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಹೆಚ್. ಹಾಲಪ್ಪ:– ಬಿ.ಡಿ.ಎ.ನವರು, ಕಾರ್ಪೊರೇಷನ್ನಿನವರೆಲ್ಲ ತಮ್ಮ ಗಮನವನ್ನು ಸೆಳೆದುಕೊಂಡುಬಿಟ್ಟರು. ಅಲ್ಲಿರುವವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಮುಖ್ಯಮಂತ್ರಿಗಳು ಉತ್ತರ ಹೇಳಿದರು. ಅವರನ್ನು ಒಕ್ಕಲೆಬ್ಬಿಸಲು ಆಗುವುದಿಲ್ಲ, ಒಕ್ಕಲೆಬ್ಬಿಸುವುದು ಬೇಡ. ಆದರೆ ಅಲ್ಲಿ ತಲೆತಲಾಂತರದಿಂದ ಮನೆಕಟ್ಟಿಕೊಂಡಿರುವವರಿಗೆ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 2,000 ಮನೆಗಳು ಎಂದು ನಾವು ಮನೆಗಳನ್ನು ಹಂಚಿರುವವರಿಗೆ ಅಲ್ಲೇ ಮನೆಗಳನ್ನು ಕಟ್ಟಿಕೊಳ್ಳಲು ಸಹಾಯವಾಗುವಂತೆ ಮಂತ್ರಿಗಳು ಇಲ್ಲಿ ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕು.

ಶ್ರೀ ಎಂ.ಪಿ. ಕುಮಾರಸ್ವಾಮಿ:– ಒಂದು ವಿಷಯವೆಂದರೆ, ಅಕ್ರಮ ಸಕ್ರಮ ಮಾಡುವಾಗ ಹಕ್ಕುಪತ್ರಗಳನ್ನು ನಿವೇಶನ ಇದ್ದವರಿಗೆ ಕೊಡುತ್ತೇವೆ. ಆದರೆ ಏನೂ ಇಲ್ಲದೇ, ಯಾವುದೋ ಬಾಡಿಗೆ ಮನೆಗಳಲ್ಲಿರುವವರಿಗೆ ನಿವೇಶನ ಕೊಡಬೇಕಲ್ಲ, ಅದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ದಯವಿಟ್ಟು ಸಚಿವರು ಹೇಳಬೇಕು. ಇಲ್ಲಿ ವಸತಿಯ ಸಮಸ್ಯೆಯಲ್ಲ, ನಿವೇಶನ ಸಮಸ್ಯೆಯೇ ಇದೆ. ನಿವೇಶನ ಇದ್ದರೆ ಅವರೇ ಒಂದು ಗುಡಿಸಲು ಹಾಕಿಕೊಳ್ಳಬಹುದು. ಆದರೆ ಅದೂ ಕೂಡ ಅವರಿಗೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅವರಿಗೆ ಅದಕ್ಕೆ ಜಾಗವಿಲ್ಲ. ಅವರು ನಮ್ಮ ಮತದಾರರು. ನಾವು ಕಡ್ಡಾಯ ಮತದಾನ ಮಾಡುತ್ತೇವೆ, ಅದೇ ಎಲ್ಲರಿಗೂ ಕಡ್ಡಾಯವಾಗಿ ನಿವೇಶನಗಳನ್ನು ಕೊಡಿ. ಯಾರ್ಯಾರಿಗೆ ಓಟು ಹಾಕುವ ಹಕ್ಕಿದೆ, ಅವರಿಗೆಲ್ಲ ಕಡ್ಡಾಯವಾಗಿ ನಿವೇಶನ, ಮನೆಗಳನ್ನು ಕೊಡಬೇಕು. ಅದು ಮಾತ್ರ ಕಡ್ಡಾಯ ಏಕಾಗಬಾರದು? ಈ ನಿವೇಶನಗಳನ್ನು ನೀವು ಕೊಂಡುಕೊಡುವಿರಾ ಅಥವಾ ಯಾವ ರೀತಿ ಮಾಡುತ್ತೀರಿ ಎಂದು ಹೇಳಬೇಕು. ಪ್ರತಿಯೊಬ್ಬರಿಗೂ ನಿವೇಶನ ಕೊಡುವಂಥ ಒಂದು ವ್ಯವಸ್ಥೆಯಾಗಬೇಕು.

ಶ್ರೀ ಜೆ. ನರಸಿಂಹಸ್ವಾಮಿ:– ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ವಸತಿ ಸಚಿವರ ಗಮನಕ್ಕೆ ತರುವುದೇನೆಂದರೆ, ಪ್ರತಿ ತಾಲ್ಲೂಕಿಗೆ 2,000 ಮನೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ವಸತಿ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಆದರೆ ವಸತಿಯಲ್ಲಿ, ಕೊಳಗೇರಿ ಅಭಿವೃದ್ಧಿ ಮಂಡಳಿ,

ಕರ್ನಾಟಕ ಹೌಸಿಂಗ್ ಬೋರ್ಡ್ ಮತ್ತು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಹೀಗೆ ಮೂರು ಸಂಸ್ಥೆಗಳಿವೆ. ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ನಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಮನೆಗೆ 60,000 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ 1,35,000 ರೂಪಾಯಿಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಕೇವಲ 60,000 ರೂಪಾಯಿಗಳಲ್ಲಿ ಮನೆ ಕಟ್ಟಲು ಹೇಗೆ ಸಾಧ್ಯ? ಕಬ್ಬಿಣ, ಸಿಮೆಂಟ್, ಇಟ್ಟಿಗೆ ಇವುಗಳೆಲ್ಲವುಗಳಿಗೂ ಗ್ರಾಮಾಂತರ ಪ್ರದೇಶ ಮತ್ತು ನಗರಗಳಲ್ಲಿ ಒಂದೇ ಬೆಲೆ ಇರುವುದರಿಂದ, ಆಶ್ರಯ ಯೋಜನೆಗೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ನಿನಲ್ಲಿ ಕೊಡುತ್ತಿರುವ 60,000 ರೂಪಯಿಗಳು ಸಾಲದಾಗಿದೆ. ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 1,35,000 ರೂಪಾಯಿಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೀರಿ. ನಗರ ಪ್ರದೇಶಗಳಿಗೆ ಒಂದು ನ್ಯಾಯ, ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆ ಒಂದು ನ್ಯಾಯವಾಗುವುದು ಬೇಡ. ತಾವು ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಯಾವ ರೀತಿ ಮನೆ ಕಟ್ಟಿಸಿ ಕೊಡುತ್ತೀರಿ, ಅದೇ ರೀತಿ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ನಿನಲ್ಲಿಯೂ ಮಾಡಬೇಕು ಇವತ್ತು ಆಂಧ್ರ ಪ್ರದೇಶದಲ್ಲಿ ಕಟ್ಟಿಸಿಕೊಡುತ್ತಿರುವ ಹಾಗೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಮೂಲಕ ಮನೆ ಕಟ್ಟಿಸಿಕೊಟ್ಟರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಈಗ ಯೂನಿಟ್ ಕಾಸ್ಟ್ 60,000 ರೂಪಾಯಿ ಇರುವುದನ್ನು ಒಂದು ಲಕ್ಷ ರೂಪಾಯಿಗಳು ಮಾಡಬೇಕೆಂದು ತಮ್ಮ ಮೂಲಕ ವಸತಿ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವೈ. ಸಂಪಂಗಿ:– ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಮಾನ್ಯ ಶಾಸಕರ ಬೇಡಿಕೆ ಏನಿತ್ತು, ಅದರಂತೆ ಬೆಂಗಳೂರಿನಲ್ಲಿರುವ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವವರಿಗೆ ಹಕ್ಕುಪತ್ರಗಳನ್ನು ಕೊಡುತ್ತೇವೆ ಎಂದು ಮಾನ್ಯ ಸಚಿವರು ಒಳ್ಳೆಯ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದು ಬರೀ ಬೆಂಗಳೂರಿಗೆ ಸೀಮಿತವಾಗದೇ, ಇಡೀ ರಾಜ್ಯದ್ಯಂತ ಈ ರೀತಿ ಇರುವಂಥ ಮನೆಗಳಿಗೂ ಹಕ್ಕುಪತ್ರಗಳನ್ನು ಕೊಟ್ಟರೆ ಬಹಳ ಉತ್ತಮ. ಮಾನ್ಯ ಸಚಿವರಿಗೆ ನಾನು ಇನ್ನೊಂದು ಮಾತನ್ನು ಹೇಳಲು ಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಸುಮಾರು 12,875 ಎಕರೆ ಮೈನಿಂಗ್ ಪ್ರದೇಶವಿದೆ. ಇದನ್ನು 1775ರಲ್ಲಿ ಜಾನ್ ಟೇಲರ್‌ರವರು ಸ್ಥಾಪನೆ ಮಾಡಿದ್ದು, ಅಲ್ಲಿ ಸುಮಾರು 9000 ಮನೆಗಳಲ್ಲಿ ಆಗಿನಿಂದಲೂ ವಾಸ ಮಾಡಿಕೊಂಡು ಬಂದಿದ್ದಾರೆ. ಅವರೆಲ್ಲರ ಮತಗಳನ್ನು ಪಡೆದು, ಅಂದಿನಿಂದ ಇಲ್ಲಿಯವರೆಗೆ ಆಯ್ಕೆಯಾಗಿ ಬಂದಂಥ ಸದಸ್ಯರು ಇಲ್ಲಿ

ಅಧಿಕಾರವನ್ನು ಮಾಡುತ್ತಿದ್ದಾರೆ. ಅಲ್ಲಿರುವ 9,000 ಮನೆಗಳಲ್ಲಿ ಸುಮಾರು 45,000 ಜನರು ವಾಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಈ ಆಸ್ತಿ ಬರುವುದರಿಂದ, ಅವರು ಈಗಾಗಲೇ ಗ್ಲೋಬಲ್ ಟೆಂಡರ್ ಕರೆಯಲು ತೀರ್ಮಾನವನ್ನು ಮಾಡಿದ್ದಾರೆ. ಗ್ಲೋಬಲ್ ಟೆಂಡರ್ ಕರೆದರೆ ಅಲ್ಲಿರುವ 9,000 ಮನೆಗಳಲ್ಲಿ ವಾಸ ಮಾಡುತ್ತಿರುವ 45,000 ಜನರು ಬೀದಿ ಪಾಲಾಗುತ್ತಾರೆ. ಹಾಗಾಗಿ, ಅವರಿಗೆ ನಮ್ಮ ರಾಜ್ಯದಲ್ಲಿ ವಾಸ ಮಾಡುವುದಕ್ಕೆ ಪರ್ಯಾಯವಾಗಿ ವ್ಯವಸ್ಥೆ ಮಾಡಬೇಕು. ಅವರಿಗೆ ಮೂಲಭೂತ ಸೌಕರ್ಯಗಳ ಜೊತೆಗೆ ನಿವೇಶನಗಳನ್ನು ಕೊಟ್ಟು ಅವರನ್ನು ಕಾಪಾಡುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಬೇಕಾಗಿದೆ. ಹಾಗಾಗಿ, ಮಾನ್ಯ ಸಚಿವರಿಗೆ ನಾನು ಅಗತ್ಯವಾದ ಈ ಒಂದು ಬೇಡಿಕೆಯನ್ನಿಡುತ್ತಿದ್ದೇನೆ. ಅವರಿಗೆ ಪರ್ಯಾಯವಾದ ವ್ಯವಸ್ಥೆಯನ್ನು ಮಾಡಬೇಕು. ಮುಂದಿನ ದಿನಗಳಲ್ಲಿ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಮಾನ್ಯ ಸಚಿವರಿಗೆ ತಮ್ಮ ಮೂಲಕ ಬೇಡಿಕೆಯನ್ನಿಟ್ಟು, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ:– ಮಾನ್ಯ ಅಧ್ಯಕ್ಷರೆ, ಎಲ್ಲ ಘೋಷಿತ ಮತ್ತು ಅಘೋಷಿತ ಕೊಳಗೇರಿಗಳಿಗೆ ಹಕ್ಕುಪತ್ರ ಕೊಡುವಂಥ ಕಾನೂನನ್ನು ಸರ್ಕಾರದಿಂದ ಜಾರಿಗೆ ತರಬೇಕು ಎನ್ನುವುದು ನನ್ನ ಮೊದಲನೇ ವಿನಂತಿ. ಎರಡನೆಯದು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶವಾದಂಥ 'ಗಿರಣಿಚಾಳ'ನಲ್ಲಿ ಬ್ರಿಟಿಷರ ಕಾಲದಿಂದ ಜನರು ವಾಸವಾಗಿದ್ದಾರೆ. ಅವರಿಗೆ ಹಿಂದಿನ ಸರ್ಕಾರದವರು ಸ್ವಾಧೀನ ಪತ್ರವನ್ನು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಒದಗಿಸಿದ್ದಾರೆ. ಸ್ವಾಧೀನ ಪತ್ರದ ಬದಲಿಗೆ ಅವರಿಗೆ ಹಕ್ಕುಪತ್ರಗಳನ್ನು ಕೊಡಬೇಕು. ಅಲ್ಲಿ ಈ ರೀತಿಯ 525 ಮನೆಗಳಿವೆ. ಅಲ್ಲಿರುವವರೆಲ್ಲ ಕಾರ್ಮಿಕರಾಗಿದ್ದಾರೆ. ಆ ಒಂದು ಪ್ರದೇಶದಲ್ಲಿ ವಾಸ ಮಾಡುವ ನಿವಾಸಿಗಳಿಗೆ ಸ್ವಾಧೀನ ಪತ್ರದ ಬದಲು ಹಕ್ಕುಪತ್ರವನ್ನು ಸರ್ಕಾರದಿಂದ ಕೊಡುವುದರ ಜೊತೆಗೆ ಅದನ್ನು ನೋಂದಣಿ ಮಾಡುವಂಥ ಕ್ರಮವನ್ನು ಸರ್ಕಾರದಿಂದ ಜಾರಿಗೆ ತರಬೇಕು. ನಮ್ಮ ಕ್ಷೇತ್ರದಲ್ಲಿ ಘೋಷಿತ ಮತ್ತು ಅಘೋಷಿತ ಕೊಳೆಗೇರಿಗಳಲ್ಲಿ ವಾಸ ಮಾಡುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ಕೊಡುವ ಮೂಲಕ ಅವರ ವಾಸದ ದೃಢೀಕರಣವನ್ನು ಸರ್ಕಾರ ಮಾಡಬೇಕಾಗುತ್ತದೆ. ಆದ್ದರಿಂದ, ಮಾನ್ಯ ವಸತಿ ಸಚಿವರು ಈ ಬಗ್ಗೆ ಆದಷ್ಟು ಬೇಗನೆ ಒಂದು ಒಳ್ಳೆಯ ಕ್ರಮವನ್ನು ತೆಗೆದುಕೊಂಡು ಎಲ್ಲಾ ಘೋಷಿತ, ಅಘೋಷಿತ ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರವನ್ನು ಕೊಡುವ ಕ್ರಮವನ್ನು

ಆದಷ್ಟು ಬೇಗ ಸರ್ಕಾರಿದಿಂದ ಜಾರಿಗೆ ತರಬೇಕು ಮತ್ತು ಗಿರಣಿಚಾಳ್ ಪ್ರದೇಶದಲ್ಲಿ ವಾಸ ಮಾಡುವಂಥ 525 ನಿವಾಸಿಗಳಿಗೆ ಹಕ್ಕುಪತ್ರವನ್ನು ಕೊಡುವ ಕ್ರಮವನ್ನು ಸರ್ಕಾರದಿಂದ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಹೆಬ್ಬಾಳ):- ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರದಲ್ಲಿ ಹೊಸದಾಗಿ ವಾರ್ಡ್‌ಗಳ ಸಂಖ್ಯೆ ಜಾಸ್ತಿ ಆದಮೇಲೆ, ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಜಾಸ್ತಿಯಾದ ಮೇಲೆ ಸುಮಾರು ಒಂದು ಸಾವಿರ ಸ್ಲಂಗಳು ಆಗಿವೆ. ಅದರಲ್ಲಿ ಹಿಂದೆ 457 ಸ್ಲಮ್‌ಗಳೆಂದು ನಾವು ಘೋಷಣೆ ಮಾಡಿದ್ದೆವು. ತದನಂತರ ಸುಮಾರು 300 ಸ್ಲಮ್‌ಗಳನ್ನು ಘೋಷಣೆ ಮಾಡಿದೆವು. ಎಲ್ಲಾ ಕೊಳೆಗೇರಿಗಳನ್ನು ಸ್ಲಮ್‌ಗಳೆಂದು ನಾವು ಮೊದಲನೆ ಹಂತದಲ್ಲಿ ಘೋಷಿಸಬೇಕಾಗಿದೆ. ಇವತ್ತು ಕೆಲವು ಕಡತಗಳು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿವೆ. ಅವುಗಳನ್ನು ಕೂಡಲೆ ತರಿಸಿಕೊಂಡು ಸ್ಲಮ್ ಪ್ರದೇಶವೆಂದು ಘೋಷಿಸಬೇಕು. ಕಾರಣವೇನೆಂದರೆ, ಕೇಂದ್ರ ಸರ್ಕಾರ ಜಾರಿಗೆ ತಂದಿರುವಂಥ ರಾಜೀವ್ ಆವಾಸ್ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಬರುತ್ತಿರುವಂಥ ಹಣದ ಮೊತ್ತ ಬಹಳ ಇದೆ. ಸುಮಾರು 3 ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಅನುದಾನ ಕೊಡುವಂಥ ಸಂದರ್ಭ ಇರುವಾಗ ಈ ಕೊಳೆಗೇರಿಗಳನ್ನು ಗುರುತಿಸಿದರೆ, ಅವರಿಗೆ title deeds ಅನ್ನು ಕೊಟ್ಟರೆ, ಆ title deed ಇದ್ದಾಗ ಮಾತ್ರ ಆ ಫಲಾನುಭವಿಗಳಿಗೆ ಅನುದಾನ ಸಿಗಲಿಕ್ಕೆ ಸಾಧ್ಯವಾಗುತ್ತದೆ. ರೆವೆನ್ಯೂ ಭೂಮಿಯಲ್ಲಿ, ಸರ್ಕಾರಿ ಜಾಗದಲ್ಲಿ ಮನೆ, ಗುಡಿಸಲು ಕಟ್ಟಿಕೊಂಡಿರುವವರೆಲ್ಲರಿಗೆ ಮಹಾನಗರ ಪಾಲಿಕೆಗೆ ಜಮೀನನ್ನು ಹಸ್ತಾಂತರಿಸಿ ಅವರು ಹಕ್ಕುಪತ್ರ ಕೊಡಬೇಕೆಂದು ಸರ್ಕಾರ ಈಗಾಗಲೇ ಆದೇಶ ಮಾಡಿದೆ. ಅದು ಬಿ.ಡಿ.ಎ. ಇರಬಹುದು, ಕಂದಾಯ ಇಲಾಖೆ ಇರಬಹುದು, Slum Board ನಲ್ಲಿರಬಹುದು, ಇವೆಲ್ಲವನ್ನೂ ಸಹ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ಹಕ್ಕುಪತ್ರಗಳನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಸುಮಾರು 20 ಸಾವಿರ ಜನರಿಗೆ ಹೊಸದಾಗಿ ಹಕ್ಕುಪತ್ರಗಳನ್ನು ಕೊಟ್ಟಿದ್ದಾರೆ. ಮನೆಗಳನ್ನು ತುಂಬಾ ಚೆನ್ನಾಗಿ ಕಟ್ಟುತ್ತಿದ್ದಾರೆ. ಆ ಮನೆಯಲ್ಲಿ ಎರಡು ಅಂತಸ್ತು, ಮೂರು ಅಂತಸ್ತು ಕಟ್ಟಿಕೊಳ್ಳಬಹುದು, ಅಂಥ ಗುಣಮಟ್ಟದ ಮನೆಗಳನ್ನು ಕಟ್ಟುತ್ತಿದ್ದಾರೆ, ಅದಕ್ಕಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ರಾಜ್ಯದಲ್ಲಿ ಸುಮಾರು 4000 ಸ್ಲಮ್‌ಗಳಿವೆ. ಅದರಲ್ಲಿ ಇನ್ನೂ ಘೋಷಣೆಯಾಗಬೇಕಾಗಿರುವಂಥ ಕೆಲವು ಸ್ಲಮ್‌ಗಳಿವೆ. ಸರ್ಕಾರಿ ಪ್ರದೇಶದಲ್ಲಿ ಶೇ.50ರಷ್ಟಿವೆ, ಖಾಸಗಿ ಕಪ್ರದೇಶದಲ್ಲಿ ಶೇ.50ರಷ್ಟಿವೆ. ನಾವು ಎಲ್ಲರನ್ನೂ ಗುಡಿಸಲು ಮುಕ್ತರನ್ನಾಗಿ ಮಾಡಬೇಕಾದರೆ ಖಾಸಗಿ ಸ್ಲಮ್‌ಗಳ ಬಗ್ಗೆ ಕೂಡ

ಯೋಚನೆ, ಗಮನಹರಿಸಬೇಕಾಗಿದೆ. ಇನ್ನು, ಪ್ರಥಮ ಹಂತದಲ್ಲಿ ನಾವು ಸರ್ಕಾರಿ ಪ್ರದೇಶದಲ್ಲಿರುವಂಥ ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರವನ್ನು ಕೊಡುವಂಥ ಕೆಲಸಕ್ಕೆ ಹೋಗಲೇ ಇಲ್ಲ, ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ. ಕಂದಾಯ ಇಲಾಖೆಯಿಂದ Urban Development Department ಗೆ ಆ ಜಮೀನನ್ನು ಹಸ್ತಾಂತರಿಸಿ, ಅಲ್ಲಿಂದ ಆಯಾ Commissioners ಗೆ townನಲ್ಲಿ, ಇಡೀ ರಾಜ್ಯದಲ್ಲಿ ಹಕ್ಕುಪತ್ರ ಕೊಡುವಂಥದ್ದು ಅತ್ಯಂತ ಜರೂರಾಗಿ ಆಗಬೇಕಾಗಿರುವಂಥದ್ದು ಇದೆ. ಆಗ ಶೇ.50ರಷ್ಟು ಜನರಿಗೆ ಮಾತ್ರ ಹಕ್ಕುಪತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಕೆಲಸವನ್ನು ಮಾನ್ಯ ಮಂತ್ರಿಯವರು ಮಾಡಬೇಕು. ಕಂದಾಯ ಇಲಾಖೆ, ವಸತಿ ಇಲಾಖೆ ಮತ್ತು Urban Development Department ಈ ಮೂರು ಇಲಾಖೆಗಳು ಸೇರಿ ಕೂಡಲೇ ಇಡೀ ರಾಜ್ಯದಲ್ಲಿ ಹಕ್ಕುಪತ್ರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಹಿರಿಯ ಶಾಸಕರಾದ ಚಂದ್ರಕಾಂತ ಬೆಲ್ಲದ್‌ರವರು ಸದನದಲ್ಲಿದ್ದಾರ. ಅವರ ಕ್ಷೇತ್ರಕ್ಕೆ ಹೋಗಿದ್ದೆವು. ನಮಗೇನೂ ಬೇಡ, ನಮಗೆ ಮೊದಲು ಹಕ್ಕುಪತ್ರ ಕೊಡಿ ಎಂದು ಎಲ್ಲರೂ ಕೇಳುತ್ತಾರೆ. ಮಾನ್ಯ ಮಂತ್ರಿಯವರು ಕ್ರಿಯಾಶೀಲ ಮಂತ್ರಿಗಳಾಗಿದ್ದಾರೆ. ಅವರು ಕೂಡಲೇ meeting ಮಾಡಿ ಎಲ್ಲರಿಗೂ ಹಕ್ಕುಪತ್ರ ಕೊಡಬೇಕೆಂಬುದು ನನ್ನ ಮೊದಲನೆಯ ಮನವಿಯಾಗಿದೆ. ಎರಡನೆಯದಾಗಿ, ಬೆಂಗಳೂರು ನಗರದಲ್ಲಿರುವ ಖಾಸಗಿ ಸ್ಲಮ್‌ಗಳಲ್ಲಿ TDR ಅನ್ನು attract ಮಾಡುತ್ತೇವೆಂದು ಮತ್ತು ಖಾಸಗಿ ಸ್ಲಮ್‌ಗಳಲ್ಲಿ ಕೂಡ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳುತ್ತಿದ್ದರು. ಇದರಿಂದ ರಸ್ತೆಗಳ ಅಗಲೀಕರಣ ಮಾಡುವುದಕ್ಕೂ ಉಪಯೋಗವಾಗುತ್ತದೆ. ಆ ಖಾಸಗಿ ಸ್ಲಮ್‌ನಲ್ಲಿರುವಂಥ ಮಾಲೀಕರನ್ನು ಕರೆದು negotiate ಮಾಡಿ TDR ಕೊಡುತ್ತೇವೆ, ಜಾಗ ಬಿಟ್ಟುಬಿಡಿ ಎಂದು ಹೇಳಬೇಕು. ಅಲ್ಲಿ ಕೂಡ ನಾವು ಹಕ್ಕುಪತ್ರಗಳನ್ನು ಕೊಟ್ಟು ಅವರಿಗೂ ಕೂಡ ಒಂದು ಮನೆ ಕಟ್ಟಿಕೊಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, Urban Development Department, Revenue Department, ವಸತಿ ಇಲಾಖೆ ಈ ಮೂರು ಇಲಾಖೆಯವರು ಸೇರಿ ಮಾಡಿದರೆ, ಏನು ಶೇ.10ರಷ್ಟು ಜನ ಸ್ಲಮ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ, ಅವರೆಲ್ಲರೂ ಕೂಡ ನೆಮ್ಮದಿಯಿಂದ ಬದುಕುವುದಕ್ಕೆ ಹಂತ ಹಂತವಾಗಿ ಅವರು ಮನೆಗಳನ್ನು ಕಟ್ಟಿಕೊಂಡು ಬೇರೆಯವರ ರೀತಿಯಲ್ಲಿ ಜೀವನ ಮಾಡುವುದಕ್ಕೆ ಮತ್ತು ಹೊಸದಾಗಿ ಸ್ಲಮ್‌ಗಳು ಬರದೇ ಇರುವ ರೀತಿಯಲ್ಲಿ ನಾವು

ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ಸ್ಲಮ್‌ಗಳನ್ನು ಹಾಗೆಯೇ ಬಿಟ್ಟರೆ ಮತ್ತೆ ಇನ್ನಷ್ಟು ಸ್ಲಮ್‌ಗಳು ಬರುತ್ತವೆ. ಅದು ಬರದೇ ಇರಬೇಕಾದರೆ ಇರುವವರಿಗೆ ಹಕ್ಕುಪತ್ರ ಕೊಡಬೇಕು, ಮನೆಗಳನ್ನು ಕಟ್ಟಿಕೊಡಬೇಕು. ಈ ಕೆಲಸವನ್ನು ಯುದ್ಧೋಪಾದಿಯಲ್ಲಿ, ಯೋಜನಾಬದ್ಧವಾಗಿ ಇಷ್ಟು ದಿವಸಗಳೊಳಗೆ ಮಾಡಿಕೊಡುತ್ತೇವೆಂದು ಮಾನ್ಯ ಮಂತ್ರಿಯವರು ತೀರ್ಮಾನ ಮಾಡಿದರೆ ತುಂಬಾ ಒಳ್ಳೆಯದು. ಆ ರೀತಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಿ.ಎಸ್. ಪಾಟೀಲ್:– ಈಗಾಗಲೇ ಮಾನ್ಯ ಮಂತ್ರಿಯವರು ಗುಡಿಸಲುರಹಿತ ರಾಜ್ಯವನ್ನಾಗಿ ಮಾಡಲಿಕ್ಕೆ ಘೋಷಣೆ ಮಾಡಿದ್ದಾರೆ. ಹಿಂದೆ ಮನೆ ನಂಬರ್, ಪಂಚಾಯಿತಿ ನಂಬರ್ ಇದ್ದರೆ ಮನೆಯನ್ನು ಕಟ್ಟಬಹುದಾಗಿತ್ತು. ಈಗ ಅದನ್ನು ಮಾಡುತ್ತಿಲ್ಲ. ನಮ್ಮಲ್ಲಿ ಕಂದಾಯ ಇಲಾಖೆಯ ಜಮೀನಿಲ್ಲದಿರುವುದರಿಂದ forest landನಲ್ಲಿ ಅದನ್ನು ಗುರುತು ಮಾಡಿ ಕಟ್ಟುವಂಥ ಆದೇಶವನ್ನು ಮಾಡಬೇಕೆಂದು ನಾನು ಸನ್ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಸಚಿವರಿಗೆ ನನ್ನ ಕಳಕಳಿಯ ವಿನಂತಿ.

ಶ್ರೀ ಅರವಿಂದ ಎಂ. ಲಿಂಬಾವಳಿ(ಮಹದೇವಪುರ):– ಸನ್ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನ ಸೆಳೆಯುವುದೇನೆಂದರೆ, ಹಿಂದೆ ಸಚಿವರಾಗಿದ್ದ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರೆ ತಾವು ಗಮನಿಸಬೇಕು. ತಾವು ಹೊರಡಿಸಿದ್ದ ಆದೇಶ withdraw ಆಗಿದೆ. 'Government Order No.UDD/122/MNG/2009/Bangalore, dated 13.1.2010, earlier issued for the issue of Patta for the land in slum area has been withdrawn with immediate effect.' ಈ Order ಆಗಿರುವುದು 24–1–2011ರಲ್ಲಿ. ನಾನು ಒತ್ತಾಯ ಮಾಡಲಿಕ್ಕೆ ಇಷ್ಟಪಡುವುದೇನೆಂದರೆ Government Order No. UDD/176/CSS/2010, Bangalore, dated 24-1-2011 ಅನ್ನು withdraw ಮಾಡಬೇಕು. ಅದನ್ನು withdraw ಮಾಡಿದಾಗ ಮಾತ್ರ ಹಳೆಯ Order implement ಆಗುತ್ತದೆ. ಇಲ್ಲದಿದ್ದರೆ ನಿಮಗೆ ಈ Order ಪ್ರಕಾರ ಹಕ್ಕುಪತ್ರ ಕೊಡುವುದಕ್ಕೆ ಸಾಧ್ಯವಿಲ್ಲ. ತಾವು Floor ನಲ್ಲಿ ಹೇಳುತ್ತಿದ್ದೀರಿ. ಈ Order ಅನ್ನು withdraw ಮಾಡಿದರೆ ಮಾತ್ರ ಹಕ್ಕುಪತ್ರ ಕೊಡುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಅನಗತ್ಯವಾಗಿ ಗೊಂದಲಗಳಾಗುತ್ತವೆ. ಮೈಸೂರು ಮತ್ತು ಬೆಂಗಳೂರಿನಲ್ಲಿ ಹಕ್ಕುಪತ್ರ ಕೊಡುವುದಕ್ಕೆ ಸಾಧ್ಯವಿಲ್ಲ. ಅನಗತ್ಯವಾಗಿ

ಗೊಂದಲವಾಗುತ್ತದೆ. ಇದು ಧಾರವಾಡಕ್ಕೂ extend ಆಗುತ್ತದೆ, ಬೆಳಗಾವಿಗೆ extend ಆಗುತ್ತದೆ. ಗುಲಬರ್ಗಾಕ್ಕೆ extend ಆಗುತ್ತದೆ, ಹುಬ್ಬಳ್ಳಿಗೆ extend ಆಗುತ್ತದೆ. ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಸಮಸ್ಯೆಯಾಗುತ್ತದೆ. ದಯವಿಟ್ಟು, ಅದನ್ನು withdraw ಮಾಡಿ ಈಗಾಗಲೇ ನಂದೀಶ್‌ರೆಡ್ಡಿಯವರು ಹೇಳಿದ ಹಾಗೆ, ಮೊದಲಿಗೆ ಹಕ್ಕುಪತ್ರ ಕೊಡಲಿ. ಆನಂತರ ಅವರು ಅಪೇಕ್ಷೆಪಟ್ಟಲ್ಲಿ ಮನೆಗಳನ್ನು ಕಟ್ಟಿಕೊಡುವಂಥದ್ದು, ಯಾರಿಗೆ ಮನೆಗಳಿಲ್ಲ ಅಂಥವರಿಗೆ ಹೊಸ ಸ್ಕೀಮ್‌ನಲ್ಲಿ vertical development ಅನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿ. ಸೋಮಣ್ಣ:– ಮಾನ್ಯ ಸದಸ್ಯರೆಲ್ಲರ ಕಳಕಳಿಯನ್ನು ಗಮನಿಸಿದ್ದೇವೆ. ಎಲ್ಲರೂ ತಮ್ಮ ಭಾವನೆಗಳನ್ನು, ಅನುಭವವನ್ನು ಹಂಚಿಕೊಂಡಿದ್ದಾರೆ. ಸ್ವಾಧೀನ ಪತ್ರವೆಂದು ಏನು ಕೊಟ್ಟಿದ್ದರು ಅದನ್ನು withdraw ಮಾಡಿ ಹಕ್ಕುಪತ್ರವನ್ನು ನೀಡತಕ್ಕಂಥದ್ದಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ. ಮಾಜಿ ಸಚಿವರಾದ ಮಾನ್ಯ ಅರವಿಂದ ಲಿಂಬಾವಳಿಯವರು ಹೇಳಿದ ಹಾಗೆ, ಈಗೇನು ಆದೇಶವಿದೆ ಅದು ಕೆರೆ ಮತ್ತು ಎಲ್ಲೆಲ್ಲಿ ರಾಜ ಕಾಲುವೆಗಳಿವೆ, ರಸ್ತೆ ಬದಿಯಲ್ಲಿ ಯಾರು ಕಟ್ಟಿಕೊಂಡಿದ್ದಾರೆ ಅಂಥವರಿಗೆ ಮಾತ್ರ ಅನ್ವಯವಾಗುತ್ತದೆ. ಬೇರೆ ಯಾವುದಕ್ಕೂ ಕೂಡ ಅನ್ವಯವಾಗುವುದಿಲ್ಲ. ಈಗಾಗಲೇ ನಂದೀಶ್‌ರೆಡ್ಡಿ, ಸತೀಶ್‌ರೆಡ್ಡಿಯವರು ಮಾತನಾಡುತ್ತಾ ಹೇಳಿದರು. ಸಾರಿಗೆ ಮತ್ತು ಗೃಹ ಸಚಿವರು ರಾಜ ಕಾಲುವೆಗಳ್ಲಿ ಕಟ್ಟಿರುವುದನ್ನು ಯಾವ ರೀತಿ ಒಡೆದು ಹಾಕಬೇಕೆಂಬ ತೀರ್ಮಾನವನ್ನು ಬೆಂಗಳೂರಿನಲ್ಲಿ ತೆಗೆದುಕೊಂಡಿದ್ದಾರೆಯೋ, ಆ ಪ್ರಕಾರ ಎಲ್ಲೆಲ್ಲಿ ಕೆರೆಗಳಿವೆ, ಆ ಕೆರೆಗಳಲ್ಲಿರುವಂಥ ಸ್ಲಮ್‌ಗಳನ್ನು ಕೂಡ ಹಸ್ತಾಂತರ ಮಾಡಿ ಅವರನ್ನು ಬೇರೆ ಕಡೆಗೆ ಒಕ್ಕಲೆಬ್ಬಿಸುವುದು ಅಂತಲ್ಲ, ಅವರಿಗೆ ಬೇರೆ ಕಡೆ ಜಾಗವನ್ನು ಕೊಟ್ಟು ಮನೆಗಳನ್ನು ಕಟ್ಟುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಎಲ್ಲೆಲ್ಲಿ ಹಕ್ಕುಪತ್ರಗಳನ್ನು ಕೊಡಬೇಕು, ಆ ಹಕ್ಕುಪತ್ರಗಳನ್ನು ಸಮರೋಪಾದಿಯಲ್ಲಿ ನೀಡತಕ್ಕಂಥದ್ದಕ್ಕೆ ಕೆಲವು ನಿಬಂಧನೆಗಳನ್ನು ಮಾಡಿದ್ದೇವೆ. Housing ಕಾರ್ಯದರ್ಶಿಯವರ ಅಧ್ಯಕ್ಷತೆಯ ಸಮಿತಿ ಇನ್ನು 8–10 ದಿನಗಳಲ್ಲಿ ಅದರ ರೂಪುರೇಷೆಗಳನ್ನು ಕೊಡುತ್ತಿದೆ. ನಾನು ಸಂಬಂಧಪಟ್ಟ ಶಾಸಕರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಇದೊಂದು ಜೀವಂತವಾಗಿರುವ ದೊಡ್ಡ ಸಮಸ್ಯೆ. ಈ ಸಮಸ್ಯೆಯನ್ನು ನಿವಾರಣೆ ಮಾಡುವುದರ ಜೊತೆಯಲ್ಲಿ ಗುಡಿಸಲು ರಹಿತ ರಾಜ್ಯ ಮಾಡಬೇಕೆಂಬ ನಮ್ಮ ಸರ್ಕಾರದಲ್ಲಿರುವ ಭಾವನೆ ಏನಿದೆ ಆ

ಪ್ರಕಾರ ಎಲ್ಲೆಲ್ಲಿ ಕೆರೆ ಅಂಗಳದಲ್ಲಿ, ರಾಜ ಕಾಲುವೆಗಳಿಲ್ಲಿ, ರಸ್ತೆ ಬದಿಯಲ್ಲಿ ಕಟ್ಟಿಕೊಂಡಿರುವವರನ್ನು ಹೊರತುಪಡಿಸಿ ಬೇರೆ ಎಲ್ಲಿರಿಗೂ ಕೂಡ ಹಕ್ಕುಪತ್ರಗಳನ್ನು ಕೊಡತಕ್ಕಂಥ ಕೆಲಸವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಅದಲ್ಲದೆ, ಮಾಜಿ ಸಚಿವರು ಮತ್ತು ಸ್ನೇಹಿತರಾದ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಹೇಳಿದ ಹಾಗೆ, ಖಾಸಗಿ ಸ್ಲಮ್‌ಗಳಲ್ಲಿರುವವರಿಗೂ ಕೂಡ ಯಾವ ರೀತಿ ಹಕ್ಕುಪತ್ರಗಳನ್ನು ಕೊಡಬೇಕೆನ್ನುವುದಕ್ಕೆ ಈಗಾಗಲೇ ಕಾರ್ಯದರ್ಶಿಯವರು ತಮ್ಮ ನೋಟ್ ಅನ್ನು ಕೊಡುತ್ತಿದ್ದಾರೆ. ಅದೂ ಮಾಡುತ್ತೇವೆ. ಅದಲ್ಲದೆ, ದೊಡ್ಡ ದೊಡ್ಡ ನಗರಗಳಲ್ಲಿ ನಾವು multi storey buildings ಅನ್ನು ಕಟ್ಟತಕ್ಕಂಥದ್ದಕ್ಕೆ ಖಾಸಗಿ ಸ್ಲಮ್‌ಗಳಲ್ಲಿರುವ ಜಾಗಗಳನ್ನು ಹೊರತುಪಡಿಸಿ ಬೇರೆ ಬೇರೆ ಕಡೆ ಏನಿದೆ ಅವೆಲ್ಲವುಗಾಳಿಗೂ ಕೂಡ ನಾವು ಆ ಸ್ಲಮ್‌ಗಳ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಮರೋಪಾದಿಯಲ್ಲಿ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದರ ಉದ್ದೇಶ, ರಾಜ್ಯಾದ್ಯಂತ ಇರುವ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ ಕೆಲವು ನಿಬಂಧನೆ ಹೊರತುಪಡಿಸಿ ಎಲ್ಲರಿಗೂ ಹಕ್ಕುಪತ್ರ ನೀಡುವ ಕೆಲಸವನ್ನು ಸರ್ಕಾರ ತಕ್ಷಣವೇ ಮಾಡತಕ್ಕಂಥದ್ದಕ್ಕೆ ಯೋಜನೆ ರೂಪಿಸಿದೆ, ಅದನ್ನು ಕಾರ್ಯರೂಪಕ್ಕೆ ತರುತ್ತೇವೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ (ಕನಕಗಿರಿ):– ಉತ್ತರ ಕರ್ನಾಟಕ ಭಾಗದಲ್ಲಿ ಬಹಳಷ್ಟು ಮಳೆಯಾಗಿ ಮನೆ ಬಿದ್ದು ಕೆಲವು village ಗಳನ್ನು ನಾವು setright ಮಾಡಿದ್ದೆವು. ಸರ್ಕಾರ setright ಮಾಡಿ ಕಳೆದ ವಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಕೊಪ್ಪಳ ಜಿಲ್ಲೆಗೆ ಬಂದು ಮನೆಯನ್ನು ಕೊಟ್ಟರು. ಮನೆ ಕೊಟ್ಟಮೇಲೆ ನಿಜವಾಗಿಯೂ ಅಲ್ಲಿ ಬಹಳಷ್ಟು ಸಮಸ್ಯೆಗಳು ಇವತ್ತಿಗೂ ಇವೆ. ಪ್ರತಿಯೊಂದು village ನಲ್ಲಿಯೂ road, drainage, currentನ ವ್ಯವಸ್ಥೆ ಇವತ್ತಿನ ವರೆಗೂ ಇಲ್ಲ. ಮೊದಲು ಹಳ್ಳಿಯಲ್ಲಿದ್ದಾಗಲಾದರೂ ಕರೆಂಟ್ ಇತ್ತು. ಅಲ್ಲಿ ಜನರು ಜೀವನ ಮಾಡುವುದಕ್ಕಾದರೂ ಒಳ್ಳೆಯ ವಾತವರಣವಿತ್ತು. ಇವತ್ತು Shifted villageಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ. Current, road ವ್ಯವಸ್ಥೆ ಇಲ್ಲ. ಸಂಬಂಧ ಪಟ್ಟ ಇಲಾಖಾಧಿಕಾರಿಗಳ ಜೊತೆ ನಾನು ಮಾತನಾಡಿದಾಗ, ಇನ್ನೂ ಹಣ ಬಂದಿಲ್ಲವೆಂದು ಹೇಳುತ್ತಾರೆ. ನಾವು ಅವಸರ ಅವಸರವಾಗಿ shift ಮಾಡಬೇಕಾದ villages ಅನ್ನು shift ಮಾಡಿ, ಅಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ, ಸಮಸ್ಯೆಗಳ ಬಗ್ಗೆ ಯಾರೂ ಕೇಳುತ್ತಿಲ್ಲ. ಸದನದಲ್ಲಿ ನಮ್ಮ ವಿದ್ಯುತ್ ಸಚಿವರಿದ್ದಾರೆ. ಇವತ್ತಿಗಾದರೂ ಅಲ್ಲಿ ಕರೆಂಟ್ ಕೊಡುವ ವ್ಯವಸ್ಥೆ ಆಗಿಲ್ಲ. ನಾನು ನಿನ್ನೆ ಗ್ರಾಮೀಣಾಭಿವೃದ್ಧಿ

ಮಂತ್ರಿಯವರನ್ನು ಭೇಟಿಯಾಗಿದ್ದೆ. NREG ಯಲ್ಲಿ ಆ ಕೆಲಸವನ್ನು ಮಾಡಬೇಕೆಂದು ಹಣವನ್ನು divide ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿಯ ಕಕ್ಕರಗೋಳ, ಸಾಲಿಗನೂರು, ಕರಡೋಣಿ ಈ ಮೂರು village ಗಳು shift ಆದರೂ ಅಲ್ಲಿ current ವ್ಯವಸ್ಥೆ ಇಲ್ಲ. ನನ್ನ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ಇಡೀ ಉತ್ತರ ಕರ್ನಾಟಕದಲ್ಲಿ ಕರೆಂಟಿನ ವ್ಯವಸ್ಥೆ ಮತ್ತು ಸರಿಯಾದ ಮೂಲಭೂತ ವ್ಯವಸ್ಥೆಗಳನ್ನು ಮಾಡಿಲ್ಲ. ಕೆಲವು ಭಾಗಗಳಲ್ಲಿ ಬಹಳಷ್ಟು ಮನೆಗಳನ್ನೇನು ದಾನಿಗಳೂ ಏನು ಕಟ್ಟಿದ್ದರು, ಅಲ್ಲಿ ಕೆಲವೊಂದಷ್ಟು ಮನೆಗಳು ಸರಿಯಾದ ರೀತಿಯಲ್ಲಿ ಆಗಿಲ್ಲ. ಉದಾಹರಣೆ ಕೊಡುವುದಾದರೆ ನನ್ನ ಕ್ಷೇತ್ರದಲ್ಲಿ ಕರಡೋಣಿಯಲ್ಲಿ ಕಟ್ಟಿರುವ ಮನೆ opening ಆಗುವ ಮುಂಚೆಯೇ ಸೀಳು ಬಿಟ್ಟಿದೆ. ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ವಿದ್ಯುತ್ ಮಂತ್ರಿಯವರು ವಿಶೇಷವಾಗಿ ಮುತುವರ್ಜಿವಹಿಸಿ ಅಲ್ಲಿಗೆ ಕರೆಂಟ್ ಕೊಡಿಸುವ ವ್ಯವಸ್ಥೆ ಮಾಡಬೇಕು. ಕೊಪ್ಪಳ ಜಿಲ್ಲೆಯಲ್ಲಿ shifted villages ಗೆ ನಿಮ್ಮ ಅಧೀಕಾರಿಗಳು ಇವತ್ತಿನವರೆಗೂ ಕರೆಂಟಿನ ವ್ಯವಸ್ಥೆ ಮಾಡುತ್ತಿಲ್ಲ. ಇವತ್ತು ಅಲ್ಲಿ ದೀಪ ಹಚ್ಚಿಕೊಂಡು ಜೀವನ ಮಾಡುವ ಪರಿಸ್ಥಿತಿ ಇದೆ. ಅಲ್ಲಿಗೆ shift ಮಾಡಿ ಅಲ್ಲಿಗೆ ಹೋಗಲಿಕ್ಕೆ ನಾವು ಜನರಿಗೆ ಹೇಳಿದ್ದೇವೆ. ಹಕ್ಕು ಪತ್ರ ಕೊಟ್ಟಿದ್ದೇವೆ. ಎಲ್ಲಾ ಗ್ರಾಮದವರನ್ನೂ ಸೇರಿಸಲಾಗಿತ್ತು. ಆದರೆ, ಅಲ್ಲಿನ ಪ್ರತಿಯೊಂದು ಗ್ರಾಮದಲ್ಲಿ ಕರೆಂಟಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು phone ಮಾಡಿ ಜನರು ಹೇಳುತ್ತಾರೆ. ಕರೆಂಟ್ ಇಲ್ಲದಿದ್ದ ಮೇಲೆ ಕುಡಿಯುವ ನೀರಿನ ವ್ಯವಸ್ಥೆ ಆಗುವುದಿಲ್ಲ. Road ನ ವ್ಯವಸ್ಥೆ ಸರಿ ಇಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು NREG ಯಲ್ಲಿ ಎಲ್ಲ ಕೆಲಸವನ್ನು ಮಾಡಬೇಕೆಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಯವರು ಸರ್ಕಾರದಿಂದ ಅದರ ಬಗ್ಗೆ ವಿಶೇಷವಾಗಿ ಒಂದು ಆದೇಶ ಮಾಡಿದರು. ಆ ಆದೇಶಕ್ಕೆ ಯಾವುದೇ ಸರ್ಕಾರಿ ಅಧಿಕಾರಿಗಳು ಕವಡೆ ಕಾಸಿನ ಕಿಮ್ಮತ್ತನ್ನೂ ಕೊಡುತ್ತಿಲ್ಲ. ಉತ್ತರ ಕರ್ನಾಟಕದ ಬಹಳಷ್ಟು ಮಂದಿ ಸಚಿವರಾಗಿದ್ದಾರೆ. ಮುರುಗೇಶ್ ನಿರಾಣಿ ಎಲ್ಲರೂ ಇದ್ದಾರೆ. ನನ್ನ ವಿನಂತಿ ಏನೆಂದರೆ, ಉತ್ತರ ಕರ್ನಾಟಕದಲ್ಲಿ village ಗಳನ್ನು shift ಮಾಡುವುದಕ್ಕೆ ಏನು ಹೊರಟ್ಟಿದ್ದೀರಿ, ಅಲ್ಲಿಗೆ ಮೊದಲು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಕೆಲಸವನ್ನು ಮಾಡಬೇಕು. ಅದನ್ನು ಮಾಡಿದರೆ shifted village ಆಗಿದ್ದಕ್ಕೂ ಸಾರ್ಥಕವಾಗುತ್ತದೆ. ನಮ್ಮ ಉತ್ತರ ಕರ್ನಾಟಕದಲ್ಲಿ ಮನೆ ಏನೋ ಸಣ್ಣದಿದೆ, ಜಾಗ ದೊಡ್ಡದು ಕೊಟ್ಟಿದ್ದೀರಿ, ಒಪ್ಪಿಕೊಳ್ಳೋಣ. ಆದರೆ, ಅಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ.

ಬಹಳಷ್ಟು ಸಮಸ್ಯೆಗಳು ನಮ್ಮ ಭಾಗದಲ್ಲಿ ಕಾಡುತ್ತಿವೆ. ಆಶ್ರಯ ಮನೆ ಕೊಟ್ಟಿದ್ದೇವೆ ಎನ್ನುವುದಕ್ಕಿಂತ ಯಾವ ರೀತಿ ಕೊಟ್ಟಿದ್ದೇವೆ ಎನ್ನುವುದನ್ನು ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಬಹಳಷ್ಟು ಜನರು ಬಡವರಿದ್ದಾರೆ, ಆ ಬಡವರನ್ನು shift ಮಾಡಿದ್ದೇವೆ. ಮೊದಲು ಊರಿನೊಳಗೆ ಕೊನೆಯ ಪಕ್ಷ ನೀರಿನ ವ್ಯವಸ್ಥೆಯಾದರೂ ಇತ್ತು. ಕೆಲವು ಭಾಗಗಳಲ್ಲಿ borewell ಇಲ್ಲ. ಈ ರೀತಿ shifted village ಗಳಲ್ಲಿ ತೊಂದರೆಯಾಗಿದೆ. ಮಾನ್ಯ ವಿದ್ಯುತ್ ಮಂತ್ರಿಯವರು ದಯಮಾಡಿ ಕೊಪ್ಪಳ ಜಿಲ್ಲೆಯಲ್ಲಿರುವ ಅಧಿಕಾರಿಗಳಿಗೆ ಪ್ರತಿಯೊಂದು street light ಹಾಕಲಿಕ್ಕೆ ಇವತ್ತೇ ತಾವು ಸೂಚನೆ ಕೊಡಬೇಕು. ಊರು ಬಿಟ್ಟು ಅರ್ಧ, ಒಂದು ಕಿ.ಮೀ. ದೂರ ಜಮೀನನ್ನು ಖರೀದಿ ಮಾಡಿ ಮನೆ ಕಟ್ಟಿಸಿದ್ದೇವೆ. ಅಲ್ಲಿ ಕರೆಂಟ್ ವ್ಯವಸ್ಥೆ ಇಲ್ಲದೆ ರಾತ್ರಿ ಹೊತ್ತು ಓಡಾಡುವುದಕ್ಕೆ ಬಹಳಷ್ಟು ತೊಂದರೆಯಾಗುತ್ತದೆ. ಊರಿನಿಂದ ಒಂದು ಕಿ.ಮೀ. ಹೊರಗಡೆ ಇರುವುದರಿಂದ ಹಾವುಗಳ ಕಾಟದಿಂದ ತೊಂದರೆ ಆಗುತ್ತದೆ. ಅದರಿಂದಾಗಿ ಜನರು ಹೊರಗಡೆ ಓಡಾಡಲಿಕ್ಕೆ ತೊಂದರೆಯಾಗಿದೆ. ಅಲ್ಲಿ ಮೊದಲು ಕರೆಂಟ್, ಕುಡಿಯುವ ನೀರು, ರೋಡ್ ವ್ಯವಸ್ಥೆ ಮಾಡಬೇಕು. ಗ್ರಾಮೀಣಾಭಿವೃದ್ಧಿ ಮಂತ್ರಿಯವರು ಇದುವರೆಗೂ NREG ಹಣವನ್ನು ಬಿಡುಗಡೆ ಮಾಡಿಲ್ಲ. Shifted village ಗೆ ವಿಶೇಷ ಗಮನ ಹರಿಸುತ್ತೇವೆ, NREG ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಆದರೆ, ಇವತ್ತಿನವರೆಗೂ NREG ಯ ಒಂದು ಪೈಸೆ ಸಹ shifted village ಗೆ ಬಿಡುಗಡೆ ಮಾಡಿಲ್ಲ. ಅದಕ್ಕಾಗಿ, ಇದರ ಬಗ್ಗೆ ಗಮನಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ):– ನಮ್ಮ ಕ್ಷೇತ್ರದಲ್ಲಿ ಆಶ್ರಯ ರಚನೆ ಆಗಿಲ್ಲ. ಎರಡನೆಯದಾಗಿ, ಗುಡಿಸಲು ರಹಿತ village ಗಳೆಂದು ತೆಗೆದುಕೊಂಡು ಗುಡಿಸಲು ಪಟ್ಟಿಗಳನ್ನು ಕಳೆದ 3 ವರ್ಷಗಳಿಂದ ಆಯ್ಕೆ ಮಾಡಿಕೊಟ್ಟಿದ್ದೇವೆ. ಆದರೆ, ಇದುವರೆಗೂ ಅದು ಕೇವಲ process ನಲ್ಲಿ ಇದೆಯೇ ಹೊರತು ಒಂದೂ ಕೂಡ ಗುಡಿಸಲು ರಹಿತ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟುವ ಕೆಲಸ ಆಗಿಲ್ಲ. ಅದು ತಕ್ಷಣ ಪ್ರಾರಂಭವಾಗಬೇಕು. ಪ್ರತಿ ಪಂಚಾಯತಿ ವ್ಯಾಪ್ತಿಯಲ್ಲಿ 55–60 ಮನೆಗಳನ್ನು ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿ General ಗೆ ಹಳ್ಳಿಗಳಲ್ಲಿ ಒಂದೋ ಎರಡೋ ಮನೆಗಳನ್ನು ಕೊಟ್ಟಿರುತ್ತಾರೆ. ಹಂಚುವ ಸಮಯದಲ್ಲಿ ಬಹಳಷ್ಟು ಗಲಾಟೆಗಳಾಗುತ್ತವೆ. ಹಾಗಾಗಿ ಒಂದೊಂದು ಪಂಚಾಯತಿಗಳಿಗೆ 50–55 ಮನೆಗಳನ್ನು ಕೊಡುವ

ಬದಲು ಗುಡಿಸಲು ರಹಿತ ಎಂದು ಒಂದು ಹಳ್ಳಿಯನ್ನು ಆಯ್ಕೆ ಮಾಡಿಕೊಂಡರೆ ಅಷ್ಟಕ್ಕೂ ನಾವು ಹೇಗೆ ಕೊಡುತ್ತೇವೆ, ಆ ರೀತಿ ಮಾಡಿದರೆ ಒಳ್ಳೆಯದು. ವರ್ಷದಲ್ಲಿ ಇಷ್ಟಿಷ್ಟೇ ಎಂದು ಕೊಡಿ. ಒಂದೊಂದು ಪಂಚಾಯತಿಯಲ್ಲಿ ಒಂದೊಂದೇ ಹಳ್ಳಿಗೆ ಕೊಟ್ಟು ಬಿಡಿ. General Category ಇರಬಹುದು, ಸಂಪೂರ್ಣವಾಗಿ ಗುಡಿಸಲು ರಹಿತ ಪಟ್ಟಿ ಕೊಟ್ಟಾಗ ಅದೇ ರೀತಿ ಆಶ್ರಯ ಮನೆಗಳನ್ನು ಮೊನ್ನೆ ಕೊಟ್ಟಂಥ ರೀತಿಯಲ್ಲಿ ಹೆಚ್ಚು ಮನೆಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಮಾತ್ರ ಮಂಜೂರಾಗುತ್ತದೆ. ಜಾಗ ಇಲ್ಲವೆಂದು Revenue ನಲ್ಲಿ ಹಲವಾರು ವರ್ಷಗಳಿಂದ ಗುಡಿಸಲು ಹಾಕಿಕೊಂಡಿರುವವರನ್ನು ಆಯ್ಕೆ ಪಟ್ಟಿಯಲ್ಲಿ ಪರಿಗಣಿಸಿಲ್ಲ. ದಯವಿಟ್ಟು, ಅಂಥವರನ್ನೂ ಆಯ್ಕೆ ಪಟ್ಟಿಯಲ್ಲಿ ಪರಿಗಣಿಸಬೇಕೆಂಬುದು ನನ್ನ ಮನವಿ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಳವಳ್ಳಿ):- ವಿಶೇಷವಾಗಿ ಗ್ರಾಮೀಣ ಭಾಗದ ತೀವ್ರತರವಾದ ಸಮಸ್ಯೆಗೆ ಸಂಬಂಧಿಸಿದಂತೆ ಮಾನ್ಯ ಸಚಿವರು ಪೂರಕವಾಗಿ ಉತ್ತರ ಕೊಡುವ ಸಂದರ್ಭದಲ್ಲಿ ಸಂಪೂರ್ಣ ಉತ್ತರ ಒದಗಿಸಿಲ್ಲವೆನ್ನುವುದು ನನ್ನ ಭಾವನೆ. ಕಳೆದ ಮೂರು ವರ್ಷಗಳ ಬಜೆಟ್‌ನಲ್ಲಿ ವಸತಿ ಇಲಾಖೆ ಎಷ್ಟು ಬಜೆಟ್ ಪಡೆದುಕೊಂಡಿತು? ಎಷ್ಟು ಹಣ ಬಿಡುಗಡೆಯಾಯಿತು? ಯೋಜನೆ ಘೋಷಣೆಯಾಗುತ್ತಿರುವ ಗಾತ್ರವೆಷ್ಟು? ಆ ಯೋಜನೆಯಲ್ಲಿ ಅನುಷ್ಠಾನ ಆದದ್ದೆಷ್ಟು? ಎಂದು ನಾನು ಪ್ರತಿ ಅಧಿವೇಶನದಲ್ಲೂ ಕೇಳುತ್ತಿದ್ದೇನೆ. ಈ ವಿಚಾರವಾಗಿ ಅಂಕಿಸಂಖ್ಯೆಗಳು ಮಾತ್ರ ಸದನದಲ್ಲಿ ಪ್ರಸ್ತಾಪವಾಗುತ್ತಿದೆಯೇ ಹೊರತು ಕಾರ್ಯಗತವಾಗುತ್ತಿರುವುದು ಕಣ್ಣಿದುರಿಗೆ ಕಾಣುತ್ತಿರುವುದು ಎಲ್ಲೂ ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ನಿಕೃಷ್ಟ ಬದುಕನ್ನು ಬದುಕುತಕ್ಕಂಥ ಸವಲತ್ತು ಇದು. ಇದನ್ನು ಪ್ರಾಮಾಣಿಕವಾಗಿ ನಾವು ಯಾರೂ ಮಾಡುತ್ತಿಲ್ಲವೆಂದು ಎಲ್ಲಾ ಪ್ರದೇಶದಲ್ಲೂ ನಿರ್ವಿವಾದವಾಗಿ ಎಲ್ಲಾ ಸದಸ್ಯರು ಒಪ್ಪತಕ್ಕಂಥ ಮಾತು. ಸಾಕಷ್ಟು ಕಡೆ ವಸತಿ ಯೋಜನೆಯಲ್ಲಿ ಬರತಕ್ಕಂಥ ಆಶ್ರಯ ಸಮಿತಿಗಳೇ ಆಗಿಲ್ಲ. ಒಂದು ಕಡೆ ನಿವೇಶನ ಕೊಡುವುದಕ್ಕೆ ಆಗಿಲ್ಲ. ಕನಿಷ್ಟ ಪಕ್ಷ ಕಡುಬಡವರು ಸಾಲ ಸೋಲ ತೆಗೆದುಕೊಂಡು ನಿವೇಶನ ನಿರ್ಮಾಣ ಮಾಡುವುದಕ್ಕಾದರೂ ಅವಕಾಶ ಸಿಗುತ್ತಿತ್ತು ಅದಕ್ಕೂ ಅವಕಾಶ ಸಿಗುತ್ತಿಲ್ಲ. ಮತ್ತೊಂದು ಕಡೆ ಈಗ ಗುಡಿಸಲು ರಹಿತ ಪಟ್ಟಿ ಎಂದು ಮಾಡಿ ಒಂದೊಂದು ಪಂಚಾಯಿತಿಯಲ್ಲಿ, ಈಗತಾನೇ ಮಾನ್ಯ ಶೇಖರ್‌ರವರು ಹೇಳುವಾಗ ಕೆಲವೊಂದು ತಪ್ಪು ಮಾಹಿತಿ ಹೇಳಿದರು. ಈ ಇಲಾಖೆಯವರು ಮಾಡಿರುವ ಒಂದು ಕೆಲಸಕ್ಕೆ ನಾನು ಶಹಭಾಷಗಿರಿಯನ್ನು ಕೊಡುವುದಕ್ಕೆ ಇಚ್ಚಿಸುತ್ತೇನೆ. ಏನೆಂದರೆ, ಲಾಟರಿ ಮೂಲಕ ಎತ್ತುವುದಕ್ಕೆ

ಅವಕಾಶ ಮಾಡಿಕೊಟ್ಟು ಒಂದೊಂದು ಪರ್ಟಿಕ್ಯೂಲರ್ ವಿಲೇಜ್‌ನ್ನು ಮಾತ್ರ ಕವರ್ ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಇದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ, ಇದರ ಎರಡನೆ ಹಂತವಾಗಿ ಹಣಕಾಸಿನ ಬಿಡುಗಡೆಯಲ್ಲಿ ತುಂಬಾ ನಿಧಾನವಾಗಿದೆ. ಈ ವಿಚಾರ ಇಲಾಖೆಯ ಅಧಿಕಾರಿಗಳು ಗ್ರಾಮೀಣ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ನಮ್ಮ ಗಮನಕ್ಕೆ ತಂದಿದ್ದಾರೆ. ಇದನ್ನು ನಾನು ನೇರವಾಗಿ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ವಿದ್ಯುತ್ ಇಲಾಖೆಯನ್ನು ನಿಬಾಯಿಸತಕ್ಕಂಥ ಮಾನ್ಯ ಸಚಿವರಲ್ಲಿ ಮನವಿ ಏನೆಂದರೆ, ಆಶ್ರಯ ಯೋಜನೆಯಲ್ಲಿ ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಕೊರತೆಯ ಆಧಾರದಲ್ಲಿ ಅಲ್ಲಿಗೆ ಒಂದು ಕಂಬ ಎಳೆಯುವುದಕ್ಕೆ, ಲೈನ್ ಎಳೆಯುವುದಕ್ಕೆ ಇಲಾಖೆಯವರು ಮುಂದಾಗುತ್ತಿಲ್ಲ. ಇನ್ನು ಮುಂದಾದರೂ ಆ ಬಡಾವಣೆಗೆ ವಿದ್ಯುತ್ ಸಂಪರ್ಕ ಮತ್ತು ಈ ಒಂದು ಆಶ್ರಯ ಸಮಿತಿಯಿಂದ ಖಾತೆಗಳನ್ನು ಕೊಡತಕ್ಕಂಥ ಸವಲತ್ತು ಸಕಾಲದಲ್ಲಿ ಹಣಕಾಸನ್ನು ಬಿಡುಗಡೆ ಮಾಡುವ ವಿಚಾರದ ಬಗ್ಗೆ ಸರ್ಕಾರ ಗಮನಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಪಿ. ಯೋಗೀಶ್ವರ್ (ಚನ್ನಪಟ್ಟಣ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಮುಖ್ಯವಾಗಿ ಗ್ರಾಮೀಣ ಪ್ರದೇಶದ ವಸತಿ ಮತ್ತು ಬೆಂಗಳೂರಿನ ಬಗ್ಗೆ ಮಾತನಾಡಿದರು. ಆದರೆ, ನಾನು ಗಮನಿಸಿದಾಗ ತಾಲ್ಲೂಕು ಕೇಂದ್ರ ಪುರಸಭೆ ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ವಾಜಪೇಯಿ ವಸತಿ ಯೋಜನೆ ಏನು ಇದೆ, ಇದು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ಅಲ್ಲಿರತಕ್ಕಂಥ ನಿಬಂಧನೆಗಳು. ಅದರಲ್ಲಿ 50 ಸಾವಿರ ಸರ್ಕಾರದ ಸಹಾಯಧನ, 50 ಸಾವಿರ ಬ್ಯಾಂಕ್ ಲೋನ್, 30 ಸಾವಿರ ಫಲಾನುಭವಿಗಳು ಕೊಡತಕ್ಕಂಥದ್ದು, ಈ ಗೊಂದಲದಿಂದಾಗಿ ನಮ್ಮ ಗುರಿ ಏನು ಸಾಧನೆ ಮಾಡಬೇಕಾಗಿತ್ತೊ ಅದನ್ನು ಮಾಡುವುದಕ್ಕಾಗುತ್ತಿಲ್ಲ. ಅದರ ಬಗ್ಗೆ ಕೂಡ ಮಾನ್ಯ ಸಚಿವರು ಗಮನಿಸಬೇಕು. ಬಹಳ ಮುಖ್ಯವಾಗಿ ಜನರ ಜೀವನದ ಗುಣ ಮಟ್ಟ ಇವತ್ತು ಸುಧಾರಿಸುತ್ತಿದೆ. ಮಾನವ ಸಂಪತ್ತು ಹಳ್ಳಿಯ ಕಡೆಯಿಂದ ಪಟ್ಟಣಗಳಿಗೆ ಸಣ್ಣ ಪುಟ್ಟ ನಗರಸಭೆ ಪಟ್ಟಣ ಪಂಚಾಯಿತಿಗಳಿಗೆ ಬರುತ್ತಿರುವ ಸಂದರ್ಭದಲ್ಲಿ ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಒಂದು ರಾಜ್ಯವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡಬೇಕೆನ್ನುವ ಅವರ ಉತ್ಸಾಹದಲ್ಲಿ ಕಾನೂನುಬದ್ಧವಾಗಿ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕವಾಗಿ ಸರ್ವೆ ಮಾಡಿಸಿ ಈ

ಒಂದು ವಸತಿ ಸಮಿತಿಯನ್ನು ಬಗೆಹರಸಬೇಕು. "ಮನೆಕಟ್ಟಿ ನೋಡು ಮದುವೆ ಮಾಡಿ ನೋಡು" ಎಂದು ಹೇಳುತ್ತಾರೆ. ಹೀಗಾಗಿ ವಸತಿ ಸಮಸ್ಯೆಯನ್ನು ನಾವು ಎಷ್ಟೆ ಚರ್ಚೆ ಮಾಡಿದರೂ ಕೂಡ ಅದು ಒಂದು ದೊಡ್ಡ ಸಮಸ್ಯೆ ಆ ನಿಟ್ಟಿನಲ್ಲಿ ಗೌರವಾನ್ವಿತ ಸಚಿವರು ಕಾರ್ಯಪ್ರವೃತ್ತರಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನೂ ಇದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಹೇಳುತ್ತಾ ಕೊನೆಯದಾಗಿ ನಾನು ಮಾನ್ಯ ಇಂಧನ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 50 ರಿಂದ 60 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿ ಸುಮಾರು ಒಂದೂವರೆ ತಿಂಗಳಾಯಿತು. ಸಮರ್ಪಕವಾಗಿ ಟ್ರಾನ್ಸ್‌ಫಾರ್ಮರ್‌ಗಳು ಗ್ರಾಮೀಣ ಪ್ರದೇಶಕ್ಕೆ ಬರುತ್ತಿಲ್ಲ. ಕುಡಿಯುವ ನೀರಿಗೂ ಕೂಡ ಸಮಸ್ಯೆಯಾಗುತ್ತದೆ. ಅಧಿಕಾರಿಗಳ ಹತ್ತಿರ ನಾನು ಈ ಬಗ್ಗೆ ಮಾತನಾಡಿದರೆ, ಅದು ಇಲ್ಲೀಗಲ್ ಆಗಿ ವಿದ್ಯುತ್‌ನ್ನು ಬಳಸುತ್ತಿದ್ದು ಹೀಗಾಗಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗುತ್ತಿವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಈ ಬಗ್ಗೆ ಸಿರಿಯೆಸ್ ಆಗಿ ಗಮನಹರಿಸಿ ಆ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತಾ ಈ ಒಂದು ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರ ಸಲಹೆಗಳನ್ನು ಕೇಳಿದ್ದೇನೆ. ಮಾನ್ಯ ಸಂಪಂಗಿಯವರು ಹತ್ತು ಸಾವಿರ ಗುಡಿಸಲುಗಳು ಇವೆ ಎಂದು ಹೇಳಿದರು. ಅದು ಅಲ್ಲಿ ಕೆ.ಜಿ.ಎಫ್.ನಲ್ಲಿರುವ ಗೋಲ್ಡ್ ಫೀಲ್ಡ್ ಪ್ರದೇಶ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರತಕ್ಕಂಥದ್ದು. ಇದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿನ ಡಿ.ಸಿ. ಮತ್ತು ಸಂಬಂಧಪಟ್ಟ ಕೆಂದ್ರ ಸರ್ಕಾರದ ಅಧಿಕಾರಿಗಳು ಹಾಗೂ ಶಾಸಕರನ್ನು ಕರೆದು ಒಂದು ಸಭೆ ಮಾಡಿ ಯಾವ ರೀತ ಆ ಸಮಸ್ಯೆ ಬಗೆಹರಿಸಬೇಕೆನ್ನುವ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಮಿತ್ರರಾದ ತಂಗಡಗಿಯವರು ಹೇಳಿದರು. ಕ್ರಾಂತಿಕಾರಕವಾದ ಕಾರ್ಯಕ್ರಮವನ್ನು ಹಾಕಿಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳು 258 ಹಳ್ಳಿಗಳನ್ನು ಸ್ಥಳಾಂತರ ಮಾಡತಕ್ಕಂಥ ಒಂದು ದೊಡ್ಡ ಯೋಜನೆ, ಈ ಯೋಜನೆಯಲ್ಲಿ ಅವರ ಕ್ಷೇತ್ರದಲ್ಲಿ ಕೆಲವು ನ್ಯೂನತೆಗಳಿವೆ ಎಂದು ಹೇಳಿದರು. ನಾನು ಈಗಾಗಲೇ ಹೇಳಿದ ಹಾಗೆ ಅವರು ಆ ಮಾಹಿತಿ ಕೊಟ್ಟರೆ ತಕ್ಷಣವೇ ಮೂಲಭೂತ ಸೌಕರ್ಯ ಯಾವುದಕ್ಕೆ ಇಲ್ಲ ಅದನ್ನು ಒದಗಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ಸಹೋದರರಾದ ಯೋಗೀಶ್‌ರವರು ಹೇಳಿದರು. ಈ ವಾಜಪೇಯಿ ವಸತಿ ಯೋಜನೆ ಮಾನ್ಯ

ಮುಖ್ಯಮಂತ್ರಿಗಳ ಕನಸಿನ ಕೂಸು. ಗ್ರಾಮೀಣ ಪ್ರದೇಶದಲ್ಲಿ ಯಾವ ರೀತಿ ಮಾಡುತ್ತಿದ್ದೇವೆ ಅದೇ ರೀತಿಯಾಗಿ ಪಟ್ಟಣ ಪ್ರದೇಶಗಳಲ್ಲಿ ಸಹ ಆಗಬೇಕೆನ್ನುವ ದೃಷ್ಟಿಯಿಂದ ನಾವು ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. 50 ಸಾವಿರ ಮನೆಗಳನ್ನು ಕಟ್ಟುವ ಯೋಜನೆಯಲ್ಲಿ ಈಗಾಗಲೇ 20 ಸಾವಿರ ಮನೆಗಳ ಕೆಲಸವನ್ನು ವಿವಿಧ ಹಂತದಲ್ಲಿ ತಾಲ್ಲೂಕುಗಳಲ್ಲಿ, ಬೇರೆ ಬೇರೆ ಕ್ಷೇತ್ರಗಳಲ್ಲಿ ನಾವು ಪ್ರಾರಂಭ ಮಾಡಿದ್ದೇವೆ. ಜಾಗ ಇಲ್ಲವೆಂದರೆ, ಅಲ್ಲಿಯ ಮಾರುಕಟ್ಟೆಯ ದರಕ್ಕಿಂತ ಕಡಿಮೆ, ಸಬ್‌ರಿಜಿಸ್ಟ್ರಾರ್‌ನಲ್ಲಿ ಏನು ದರವಿದೆ ಆ ದರದಲ್ಲಿ ಪರ್ಚೆಸ್ ಮಾಡಿ ಕೊಡತಕ್ಕಂಥ ಕೆಲಸವನ್ನೂ ಕೂಡ ಮಾಡುತ್ತಿದ್ದೇವೆ. ಪಟ್ಟಣದಲ್ಲಿ ಆಶ್ರಯ ಸಮಿತಿಗಳನ್ನು ಮಾಡಿಲ್ಲವೆಂದು ಹೇಳಿದ್ದಾರೆ. ಎಲ್ಲೆಲ್ಲಿ ಆಶ್ರಯ ಸಮಿತಿ ಇಲ್ಲವೋ ಅಲ್ಲಿ ಈ ಅಧಿವೇಶನ ಮುಗಿದ ತಕ್ಷಣವೇ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಆಶ್ರಯ ಸಮಿತಿಯನ್ನು ನೇಮಕ ಮಾಡುವುದಕ್ಕೆ ನಾವು ಆದೇಶವನ್ನು ಹೊರಡಿಸುತ್ತಿದ್ದೇವೆ. ಬ್ಯಾಂಕ್‌ಗಳು ಏನು 50 ಸಾವಿರ ಲೋನ್ ಕೊಡುತ್ತಿವೆ ಇದು ನಾವು ಕೊಡತಕ್ಕಂಥದ್ದು ಕೇವಲ 3% ನಲ್ಲಿ. ಅದಕ್ಕಾಗಿ State Bank of Mysore ಮತ್ತಿತರ ಬ್ಯಾಂಕ್‌ಗಳು ಜೊತೆಗೆ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಚರ್ಚೆ ಮಾಡುತ್ತಿದ್ದಾರೆ. ಅದನ್ನೂ ಕೂಡ ನಾವು ಬಗೆಹರಿಸಿ ಕೊಡುತ್ತೇವೆ. ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ, ಕೇಂದ್ರ ಸರ್ಕಾರದ ಇಂದಿರಾ ಆವಾಸ್ ಯೋಜನೆಯಿಂದ ನಮಗೆ ಬರುತಕ್ಕಂಥದ್ದು ಒಂದು ವರ್ಷಕ್ಕೆ 96,960 ಮನೆಗಳು. 2099–10 ಮತ್ತು 2010–11 ರಲ್ಲೂ ಅಷ್ಟೇ ಬಂದಿದೆ. ಬೇರೆ ಮನೆಗಳನ್ನು ನಾವು ಬಸವ ವಸತಿ ಯೋಜನೆಯಿಂದ ರಾಜ್ಯ ಸರ್ಕಾರದ Funding ನಲ್ಲಿ ಯೋಜನೆಗಳನ್ನು ಕೈಗೆತ್ತಿಕೊಂಡು ಯೋಜನೆಗಳನ್ನು ಮಾಡಿ ಸಾಮಾನ್ಯರಿಗೆ, ಬಡವರಿಗೆ ಈ ಯೋಜನೆ ತಲುಪಬೇಕೆಂಬುದು ನಮ್ಮ ಚಿಂತನೆಯಾಗಿದೆ. ಯಾವ್ಯಾವ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಿವೆ, ನಾವು ಬೆಂಗಳೂರು ನಗರದವರನ್ನು ಯಾವ ರೀತಿಯಾಗಿ ಕರೆಯುತ್ತೇವೆಯೋ ಅದೇ ರೀತಿ ಬೇರೆ ಬೇರೆ ಜಿಲ್ಲೆಗಳಿಗೆ ಬಂದಾಗ ಆಯಾಯ ಕ್ಷೇತ್ರಗಳಲ್ಲಿ ಕುಳಿತುಕೊಂಡು ಜಿಲ್ಲಾ ಕೇಂದ್ರಗಳಲ್ಲಿ ಸಭೆಗಳನ್ನು ಮಾಡಿ ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಇದನ್ನು ಪೂರೈಸುವಂಥ ಕೆಲಸ ಮಾಡುತ್ತೇವೆ. ಇದರ ಜೊತೆಯಲ್ಲಿ Actual ಫಲಾನುಭವಿಗಳು ಯಾರು ಇದ್ದಾರೆ ಇವರಿಗೆ ಇದನ್ನು ಮುಟ್ಟಿಸುವಂಥ ಕೆಲಸ ಮಾಡೋಣ. ಮಾನ್ಯ ರಘುಪತಿ ಭಟ್ ಮತ್ತು ಹಾಲಪ್ಪನವರು ಕೇಳಿದ ಆ ಹಕ್ಕುಪತ್ರಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮೊದಲಿನಿಂದಲೂ ಯಾವ ರೀತಿಯಾಗಿ ನಡೆದುಕೊಂಡು ಬಂದಿತ್ತೊ ಅದೇ ನಡೆದುಕೊಂಡು ಬರುತ್ತದೆ. ಆದರೆ ಅರಣ್ಯ ಭೂಮಿಯಲ್ಲಿರತಕ್ಕಂಥವರಿಗೆ

ಈಗಾಗಲೇ ಸನ್ಮಾನ್ಯ ಸಭಾನಾಯಕರಾದ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಅದರ ಬಗ್ಗೆ ಒಂದು ಸಭೆಯನ್ನು ಕರೆದು ಅಚಿತಿಮ ರೂಪಕ್ಕೆ ತರುತ್ತೇವೆ. ಒಟ್ಟಾರೆ ರಾಜ್ಯದಲ್ಲಿ ಸುಮಾರು ವರ್ಷಗಳಿಂದ ಗುಡಿಸಲಿನಲ್ಲಿ ಯಾರು ವಾಸ ಮಾಡುತ್ತಿದ್ದಾರೆ ಅವರಿಗೆ ಎಲ್ಲಿಯೂ ಜಾಗವಿಲ್ಲ ಅಂಥವರಿಗೆ ಏನು ಮಾಡುತ್ತೀರಿ ಎಂದು ಕೇಳಿದರು. ಹಳ್ಳಿಗಾಡಿನ ವ್ಯಾಪ್ತಿಯಲ್ಲಿ ಬರುವ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ವ್ಯಾಲ್ಯೂ ಏನೂ ಇದೆ, ಒಂದು ಎಕರೆಗೆ ಒಂದು ಲಕ್ಷ ರೂಪಾಯಿಗಳಿದ್ದರೆ ಅಲ್ಲಿ ಮೂರು ಲಕ್ಷ ರೂಪಾಯಿಗಳವರೆಗೆ ಕೊಟ್ಟು ಆ ಜಮೀನನ್ನು ಪರ್ಚೇಸ್ ಮಾಡಿ ಅಲ್ಲಿ ಫಲಾನುಭವಿಗಳು ಯಾರು ಇದ್ದಾರೆ ಅವರನ್ನು ಗುರುತಿಸಲಿಕ್ಕೆ ನಾವು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಪ್ರಕ್ರಿಯೆ ಪ್ರಾರಂಭವಾಗಿದೆ. ಇದು ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ನನಗೆ ಅನ್ನಿಸುತ್ತಿದೆ ಇನ್ನು ಎಂಟು ಹತ್ತು ತಿಂಗಳಲ್ಲಿ ರಾಜ್ಯದ 224 ಕ್ಷೇತ್ರಗಳ ಪೈಕಿ 196 ಕ್ಷೇತ್ರಗಳಲ್ಲೂ ಕೂಡ ಈ ಯೋಜನೆಗೆ ಕೈಗೂಡಸತಕ್ಕಂಥ ಕೆಲಸ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆ. ಇದರಲ್ಲಿ ನಾವು ಯಾವುದೇ ಕಾರಣಕ್ಕೆ ಅರ್ಹ ಫಲಾನುಭವಿಗಳಿಗೆ ಅರ್ಹತೆ ಮೇಲೆ ಕೊಡುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಸನ್ಮಾನ್ಯ ನರೇಂದ್ರ ಸ್ವಾಮಿಯವರು ಹಣ ಬಿಡುಗಡೆ ಮಾಡುವುದು ವಿಳಂಭವಾಗಿದೆ ಎಂದು ಹೇಳಿದರು. ಮೊದಲು ಅಧಿಕಾರಿಗಳು ಫಲಾನುಭವಿಗಳಿಗೆ ಹಣವನ್ನು ಕೊಡುತ್ತಿದ್ದರು. ನಾವು ಈ ಸಾರಿ ಮೊದಲನೆ ಬಾರಿಗೆ GPS ಮಾಡಿ ಯಾರು ಫಲಾನುಭವಿ ಇದ್ದಾರೆ ಅವರ ಹೆಸರಿಗೆ ಹಣವನ್ನು ಕೊಡುತ್ತಿದ್ದೇವೆ. ಎಲ್ಲೆಲ್ಲಿ ಫೌಂಡೇಷನ್ ಹಾಕಿದ್ದಾರೆ ಅಂಥ ಕಡೆಗಳಲ್ಲಿ ನಾವು ಮೂರು ಹಂತಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಮೊದಲನೆ ಹಂತ ಇಪ್ಪತ್ತು ಸಾವಿರ ತದನಂತರ ಹದಿನೈದು ಸಾವಿರ ರೂಪಾಯಿ ಈ ರೀತಿಯಾಗಿ ಬಿಡುಗಡೆ ಮಾಡುತ್ತಿದ್ದೇವೆ. ತಮ್ಮ ಕ್ಷೇತ್ರದಲ್ಲಿ ಏನಾದರೂ ಇದ್ದರೆ ಕೊಡಿ. ಆದರೆ ಒಂದು ಸತ್ಯ ಹಣಕ್ಕೆ ತೊಂದರೆಯಿಲ್ಲ. ಮೊದಲು ಅಧಿಕಾರಿಗಳ ಕೈಗೆ ಹಣ ಕೊಟ್ಟು ಎಲ್ಲೋ ಒಂದು ಕಡೆಗೆ ಯಾರೋ ಮಾಡಿದ ಪಾಪಕ್ಕೆ ಸರ್ಕಾರವನ್ನು ದೋಷಣೆ ಮಾಡುವಂಥ ಸ್ಥಿತಿ ಏನು ಇತ್ತು ಅದನ್ನು ತಪ್ಪಿಸಬೇಕೆಂದು ಆಯಾಯ ಫಲಾನುಭವಿಗಳ ಹೆಸರಿನಲ್ಲಿ ಜಿರೋ ಅಕೌಂಟ್ ಮಾಡಿ ನೇರವಾಗಿ ಅವರಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

(6) ವರದಿಯನ್ನೊಪ್ಪಿಸುವುದು

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ದಿನಾಂಕ 09–07–2010 ರಂದು ಸದನವನ್ನು ಮುಂದೂಡಿದ ನಂತರ ವಿಧಾನ ಸಭೆಯ